ಅಚಲ

ತಿಂಗಳ ಪತ್ರಿಕೆ

ಅಕ್ಟೋಬರ್ - 2003

17

ಒಳಗೇನಿದೆ

ಜಾಗೃತಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 18 ಸಂಚಿಕೆ : 10

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೆ,

ಕಳೆದ 18 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ

ವಾರ್ಷಿಕ ಚಂದಾ - ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಅಜೀವ ಚಂದಾ - ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಅಚಲ ವಿಳಾಸ

108, ಸ್ಕೈಲೈನ್ ಸುರಭಿ, 14-ಪಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ಸಂಪಾದಕೀಯ

ನಾಮಕರಣದ ಅವಾಂತರ

ಕರ್ನಾಟಕದಲ್ಲಿ ಮಹಿಳಾ ವಿಶ್ವವಿದ್ಯಾಲಯಕ್ಕೆ ಅಕ್ಕಮಹಾದೇವಿಯ ಹೆಸರಿಡಬೇಕೆಂಬ ಬೇಡಿಕೆ, ಅದಕ್ಕಾಗಿ ಹೋರಾಟ ಮತ್ತೊಮ್ಮೆ ತೀವ್ರವಾಗಿದೆ. ಹಾಗೆಯೇ ಮಾಧ್ಯಮಗಳಲ್ಲಿ ಸುದ್ದಿಯಾಗಿದೆ. ಚುನಾವಣೆ ಹತ್ತಿರ ಬರುತ್ತಿದ್ದಂತೆ 'ಮಹಿಳೆ' ರಾಜಕಾರಣಿಗಳ ಹೋರಾಟಕ್ಕೆ ಮುಖ್ಯ ವಿಷಯವಾಗುವುದು ಹೊಸತೇನಲ್ಲ. ಆದರೆ ಇತ್ತೀಚೆಗೆ ಭಾರತೀಯ ಜನತಾಪಕ್ಷ ಈ ವಿಷಯವನ್ನೇ ಮುಖ್ಯ ಅಜೆಂಡಾ ಮಾಡಿಕೊಂಡು ತಾಲ್ಲೂಕು, ಜಿಲ್ಲಾ ಹಂತಗಳಿಂದ ಹಿಡಿದು ರಾಜ್ಯಮಟ್ಟದವರೆಗೂ ಹೋರಾಟ ನಡೆಸುವ ಕಾರ್ಯಕ್ರಮಗಳನ್ನು ಸೂಚಿಸಿದೆ. ಅಕ್ಕಮಹಾದೇವಿಯ ಹುಟ್ಟೂರಾದ ಉಡುತಡಿಯಿಂದ ಪ್ರಾರಂಭಿಸಿದ ಅವರ ಹೋರಾಟದಲ್ಲಿ ಅಕ್ಕನಿಗಿಂತ ಸೋನಿಯಾಗಾಂಧಿಯವರ ಹೆಸರೇ ಹೆಚ್ಚು ಕೇಳಿಸುತ್ತಿದೆ. ಕಾಂಗ್ರೆಸಿಗರಿಗಿಂತ ಹೆಚ್ಚು ಸೋನಿಯಾ ಪಠಣ ಮಾಡುತ್ತಿರುವ ಬಿ.ಜೆ.ಪಿ. ಮಹಿಳಾ ಹೋರಾಟಗಾರರ ಉದ್ದೇಶ ಏನು ಎಂಬುದು ರಹಸ್ಯವೇನಲ್ಲ. ಮಹಿಳಾ ವಿಶ್ವವಿದ್ಯಾಲಯ ಹೇಗಿರಬೇಕು, ಹೇಗೆ ನಡೆಯಬೇಕು, ಅಲ್ಲಿ ಏನನ್ನು ಬೋಧಿಸಬೇಕು ಎಂಬ ವಿಷಯಗಳಿಗಿಂತ ವಿಶ್ವವಿದ್ಯಾಲಯದ ನಾಮಕರಣ ಮಹೋತ್ಸವವೇ ಇಷ್ಟೊಂದು ಅದ್ದೂರಿಯಾಗಿ ನಡೆಸುತ್ತಿರುವ ಬಿ.ಜೆ.ಪಿ.ಯ ದ್ವಂದ್ವ ನೀತಿಗೆ ಅವರದೇ ಅಧಿಕಾರದಲ್ಲಿರುವ ಕೇಂದ್ರ ಸರ್ಕಾರದ ನಿಲುವು ಕುತೂಹಲಕಾರಿ ಮತ್ತು ಖಂಡನೀಯ.

ಕೇಂದ್ರದ ಮಾನವ ಸಂಪನ್ಮೂಲ ಇಲಾಖೆಯ ಆದೇಶದಂತೆ ವಿಶ್ವವಿದ್ಯಾಲಯದ ಧನಸಹಾಯ ಆಯೋಗವು ಮಹಿಳಾ ಅಧ್ಯಯನ ಕೇಂದ್ರಗಳಿಗೆ ಇತ್ತೀಚೆಗೆ ಸುತ್ತೋಲೆಯನ್ನು ಕಳುಹಿಸಿದೆ. ಹತ್ತನೆಯ ಯೋಜನೆಯ ಮಾರ್ಗದರ್ಶಿ ಸೂತ್ರದನ್ವಯ ಮಹಿಳಾ ಅಧ್ಯಯನ ಕೇಂದ್ರಗಳನ್ನು **ಮಹಿಳೆ ಮತ್ತು ಕುಟುಂಬ ಅಧ್ಯಯನ ಕೇಂದ್ರ**ಗಳೆಂದು ನಾಮಕರಣ ಮಾಡಬೇಕೆಂದು ವಿಶ್ವವಿದ್ಯಾಲಯ ಹಣಕಾಸು ಆಯೋಗ ತನ್ನ ಅಧೀನ ಅಂಗಗಳ ಮಹಿಳಾ ಅಧ್ಯಯನ ಕೇಂದ್ರಗಳಿಗೆ ಸೂಚಿಸಿದೆ. ಈ ಕ್ರಮ ನಿಜವಾಗಿಯೂ ಪ್ರಜಾಸತ್ತಾತ್ಮಕ ವಿರೋಧಿಯಾದುದು. ವಿಶ್ವವಿದ್ಯಾಲಯಗಳ ಸ್ವಾಯತ್ತತೆಯನ್ನು ಪ್ರತಿಪಾದಿಸುವ ಹಣಕಾಸು ಆಯೋಗವು ಕೇಂದ್ರ ಸರ್ಕಾರದ ಆಯೋಜನಾ ಸಮಿತಿಯ ಆದೇಶಕ್ಕೆ ತಲೆಬಾಗಿರುವುದು ಆಶ್ಚರ್ಯ ಅಷ್ಟೇ ಅಲ್ಲ ಹಾಸ್ಯಾಸ್ಪದ. 'ಮಹಿಳಾ ಅಧ್ಯಯನ ಕೇಂದ್ರ'ದ ಹೆಸರನ್ನು ಅಪಮೌಲ್ಯ ಮಾಡುತ್ತಿರುವ ಬದಲಾದ ಹೆಸರನ್ನು ಸೂಚಿಸುವಾಗಲೂ ಧನಸಹಾಯ ಆಯೋಗವು ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಸಂಪರ್ಕಿಸಿಲ್ಲವೆಂಬ ಅಂಶವೂ ಖಂಡನೀಯ.

ಮಹಿಳಾ ಅಧ್ಯಯನವನ್ನು ವಿಶ್ವವಿದ್ಯಾಲಯಗಳ ಅಧ್ಯಯನ ಶಿಸ್ತುಗಳ ಭಾಗವಾಗಿ ರೂಪಿಸಿದಾಗ ಅದರ ಮೂಲ ಉದ್ದೇಶವು ಮಹಿಳೆಯರಿಗೆ ವಿಪುಲವಾದ ಅವಕಾಶಗಳನ್ನು ಒದಗಿಸಿಕೊಟ್ಟು ಮಹಿಳಾ ಸಶಕ್ತೀಕರಣವನ್ನು ಸಾಧಿಸುವುದೇ ಆಗಿದೆ. ಆದರೆ ಅವರನ್ನು ಕುಟುಂಬಕ್ಕೆ ಸೀಮಿತಗೊಳಿಸುವುದು ಹಿನ್ನಲೆಯ ಪ್ರಯತ್ನವಾಗುತ್ತದೆ. ಇಂತಹ ಸಂಕುಚಿತ ಮತ್ತು ರೂಢಿಗತ ಪದ್ಧತಿಗಳ ವಿರುದ್ಧವೇ ಮಹಿಳಾ ಅಧ್ಯಯನವನ್ನು ಯೋಜಿಸುವಾಗಿನ ಪ್ರಯತ್ನವಾಗಿತ್ತು. ಮಹಿಳಾ ಅಧ್ಯಯನವು ಸಾಮಾಜಿಕ ಬದಲಾವಣೆಗೆ ಚಾಲನೆ ನೀಡುತ್ತದೆ, ಎಂಬ ಅಂಶವನ್ನು ನಮ್ಮ ಕಳೆದೆರಡು ದಶಕಗಳ ಅನುಭವವು ದೃಢಪಡಿಸಿದೆ. ಸ್ತ್ರೀವಾದಿ ದೃಷ್ಟಿಕೋನದಿಂದ ಸಮಾಜವನ್ನು ವಿಶ್ಲೇಷಿಸಿದಾಗ ಹಲವಾರು ಯೋಜನಾ ನೀತಿಗಳಲ್ಲಿ ಬದಲಾವಣೆಯಾಗಿದೆಯೆಂಬುದು ವಾಸ್ತವ ಸತ್ಯ. ಇಂತಹ ಆರೋಗ್ಯಕರ ಬೆಳವಣಿಗೆಯಾಗಿರುವ ಸಂದರ್ಭದಲ್ಲಿ ಕೇಂದ್ರ ಮಾನವ ಸಂಪನ್ಮೂಲ ಇಲಾಖೆಯು ಮಹಿಳಾ ಅಧ್ಯಯನ ಕೇಂದ್ರದ ಹೆಸರನ್ನು ಬದಲಾಯಿಸಲು ಹೊರಟಿರುವುದು ಅಬದ್ಧವಾದದ್ದು.

ನಾಮ ಬದಲಾವಣೆಯಷ್ಟೇ ಅಲ್ಲ, ಕಟ್ಟಾ ಸಾಂಪ್ರದಾಯಿಕತೆಯನ್ನು ಮೌಢ್ಯದ ವಿಚಾರಗಳನ್ನು ಪಠ್ಯಕ್ರಮದಲ್ಲಿ ತುಂಬಿ ಪಠ್ಯವನ್ನು ಪ್ರತಿಗಾಮಿಯನ್ನಾಗಿ ಮಾಡಕೂಡದೆಂಬ ಎಚ್ಚರಿಕೆಯನ್ನು ಎಲ್ಲ ಪ್ರಜ್ಞಾವಂತರು ಈ ಸಂದರ್ಭದಲ್ಲಿ ಸರ್ಕಾರಕ್ಕೆ ನೀಡಬೇಕಾಗಿದೆ. ಮಹಿಳೆಯರ ಸ್ಥಾನಮಾನಕ್ಕೆ ಧಕ್ಕೆಯುಂಟುಮಾಡುವ ಮತ್ತು ಅವರನ್ನು ಕೌಟುಂಬಿಕ ವಲಯಕ್ಕೆ ಸೀಮಿತಗೊಳಿಸುವ ಯಾವ ಪ್ರಯತ್ನಗಳೂ ನಡೆಯದಂತೆ ಮಹಿಳಾ ಚಳುವಳಿ ಹೋರಾಡಬೇಕಿದೆ.

- ಎನ್. ಗಾಯತ್ರಿ

ಕ್ಯಾಥೇಕೋಲ್‌ವಿಟ್ಜ್

- ಶ್ಯಾಮಾ

ಕಲೆಯು ಜನಾಂಗದ ನಾಗರೀಕತೆಯ ಪ್ರತಿಬಿಂಬವು, ಎಚ್ಚರವಿದ್ದೋ, ಇಲ್ಲದೆಯೋ ಕಲೆಯು ತಾನು ಪ್ರಕಾಶಗೊಂಡಕಾಲದ ಸಾಮಾಜಿಕ ವ್ಯವಸ್ಥೆಯನ್ನೂ ಸಂಸ್ಕೃತಿಯ ಬೆಳವಳಿಕೆಯನ್ನೂ ಪ್ರತಿಬಿಂಬಿಸುವ ರಸಗನ್ನಡಿಗಳಾಗಿ ಪರಿಣಮಿಸಿರುವುದು. ಪಾಶ್ಚಿಮಾತ್ಯ ರಾಜ್ಯಗಳಲ್ಲಿರುವ ಕಲಾಸೌಧಗಳಲ್ಲಿ ನೋಡಿರಿ! ಆ ಚಿತ್ರಪಂಜ್ತಿಗಳು ಸಾಮಾಜಿಕ ಬೆಳವಳಿಕೆಗಳನ್ನು ಸಜೀವ ಶಾಸನಗಳಂತೆ ತೋರಿಸಿಕೊಡುವುವು. ಮತಾಭಿಮಾನ, ಧನದ ಹೆಮ್ಮೆ ಮತ್ತು ವಾಣಿಜ್ಯಧ್ಯೇಯ, ಈ ಬಗೆಯ ಗುಂಪುಗಳಿಗೆ ಒಳಗಾದ ಸಮಾಜದ ಕಾಲಪರಿಸ್ಥಿತಿಯನ್ನು ಆಯಾ ಕಾಲದ ಕಲೆಯು ಕನ್ನಡಿಯಂತೆ ಪ್ರತಿಬಿಂಬಿಸಿರುವುದು. ಪಾಶ್ಚಿಮಾತ್ಯ ರಾಜ್ಯಗಳಲ್ಲಿ ಈ ಕ್ರಮ ಹಿಡಿದೇ ಈಗ್ಗೆ ಐವತ್ತು ವರ್ಷಗಳ ಹಿಂದೆ ಕಲೆಗೆ ಮತ್ತೊಂದು ರೂಪ ದೊರೆಯಿತು. ಆಗಿನ ದುಃಸ್ಥಿತಿಯನ್ನು ಅಂದರೆ : ಜನಸಾಮಾನ್ಯದ ಕ್ಲೇಶಮಯ ಹೋರಾಟವನ್ನು ತಪ್ಪಿಸಿ ; ಶಾಂತಿಸಮಾಧಾನಯುತ ಸಮಾಜ ಸ್ಥಾಪನೆ ಮಾಡುವ ಕಲಾಪದ್ಧತಿಯೊಂದು ಜನ್ಮತಾಳಿತು. ಈ ಬಗೆಯ ಕಲಾವಿದರು ತಮ್ಮ ಅಸಮಾನ ಕಲಾಕೌಶಲ್ಯದಿಂದ ಹೊಸದೊಂದು ಜನಾಭಿಪ್ರಾಯವನ್ನು ಸ್ಥಾಪಿಸಿದರು. ಕಲೆಯ ಈ ಹೊಸ ಪದ್ಧತಿಯು ಮಿಲೆಟ್ ಎಂಬುವರಲ್ಲಿ ಜನ್ಮಧಾರಣ ಮಾಡಿ ಕ್ಯಾಥೇಕೋಲ್‌ವಿಡ್ಜ್‌ರವರಲ್ಲಿ ಫಲಕಾರಿಯಾಯಿತು. ಆತ್ಮಸಾಕ್ಷಿಗನುಸಾರವಾಗಿ ಕೆಲಸ ಮಾಡಬಲ್ಲ ಸಮರ್ಥಳೂ, ಸಾಹಸಿಯೂ ಆದ ಜರ್ಮನ್ ಕಲಾವಿದಳಲ್ಲಿ ಈ ಹೊಸ ಪದ್ಧತಿಯು ಬಲು ಮುಂದುವರಿಯಿತು. ಈಗ್ಗೆ ಮೂವತ್ತು ವರ್ಷಗಳಿಗೆ ಮುಂಚೆ ಈಕೆಯು ಜರ್ಮನ್ ರಾಜ್ಯದಲ್ಲಿ, ಕಲಾಪ್ರಪಂಚದ ಮುಂದೆ ಬಂದಳು. ಕಲಾವಿಮರ್ಶಕರು ಈಕೆಯ ಚಿತ್ರದಲ್ಲಿನ ಪರಿಶುದ್ಧತೆ, ಸೃಷ್ಟಿಕರ್ತನ ನಿಜವಾದ ಆಶಯವನ್ನು ವ್ಯಕ್ತಗೊಳಿಸುವ ಕಲ್ಪನೆಗಳು, ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಅಸದೃಶ ರೀತಿ, ಕಲಕಳಿಸುವ ಊಹೆ ಮತ್ತು ಮನೋವೇದನೆಗಳು, ಇವುಗಳಿಂದ ಬೆರಗಾದರು.

ಈಕೆಯು ಕಲಾಪ್ರಪಂಚಕ್ಕೆ ಕಾಲಿಟ್ಟಮೇಲೆ ಆರ್ತರಿಂದ ಮೊದಲುಗೊಂಡು, ದೂರಭಿಮಾನಿಗಳವರಿಗೆ ಎಲ್ಲ ಸಮಾಜದ ಒಳಹೊಕ್ಕು ನೋಡಬೇಕಾಗಿ ಬಂದಿತು. ಕಲಾವಿಮರ್ಶಕರು ಈಕೆಯ ಜೀವನವನ್ನು ದೊಡ್ಡ ಉದ್ಗ್ರಂಥಗಳಾಗಿ ಮಾಡಿರುವರು. ಕಲಾಸೌಧಗಳಲ್ಲಿ ಚಿತ್ರಪಠಗಳೂ, ಇದಕ್ಕೆ ಸಂಬಂಧಪಟ್ಟ ಇತರ ಕಲಾಕೌಶಲ್ಯಗಳೂ ಈಗಲೂ ಪ್ರದರ್ಶ್ಯಗಳಾಗಿವೆ. ಈಕೆಯ ಅಮೌಲ್ಯವಾದ ಕಲಾಫಲಗಳನ್ನು ಕಂಡು ಜರ್ಮನ್ ವಿಶ್ವವಿದ್ಯಾನಿಲಯದವರು, ಪಂಡಿತಳು (ಪ್ರೊಫೆಸರ್) ಎಂಬ ಬಿರುದನ್ನು ಕೊಟ್ಟರು. ಇದು ಸುಲಭದಲ್ಲಿ ಸಂಪಾದಿಸುವ ಬಿರುದಲ್ಲ. ಅನೇಕ ವರ್ಷಗಳು ಕಷ್ಟಪಟ್ಟು ವ್ಯಾಸಂಗ ಮಾಡುವುದು ಮಾತ್ರವಲ್ಲದೆ, ಸ್ವತಂತ್ರ ಸಂಶೋಧನೆಯಿಂದ ಮಾತ್ರವೇ ದೊರೆಯಲು ಸಾಧ್ಯವಾದುದು. ಇಂತಹ ಪದವಿಯು ಈಕೆಗೆ ಅಪ್ರಾರ್ಥಿತವಾಗಿ ದೊರೆಯಿತು.

ಈಕೆಯ ಚಿತ್ರಪಠಗಳು ಯಾವ ಜಾತಿ, ಮತದ ಕಟ್ಟುಗಳಿಗೂ ಒಳಪಡದೇ, ಆರ್ತಜನರ ಸಾಮಾಜಿಕ ದುಃಸ್ಥಿತಿ, ಕೆಲಸಗಾರರ ರೋದನ, ದೈವಿಕ ಮತ್ತು ಸಾಮಾಜಿಕ ಮುಕ್ತಿಮಾರ್ಗ, ಇವೆಲ್ಲವನ್ನೂ ಹೃದಯದೊಳಗೆ ನಾಟುವಂತೆ ಚಿತ್ರಿತವಾಗಿವೆ. ಯೋಚಿಸಿ ನೋಡಿದರೆ ಇವೆಲ್ಲವೂ ಸತ್ಯವಾದುವೆಂದು ಸ್ಪಷ್ಟವಾಗುವುದು. ನಿಜವಾದ ಕಲೆಯೇ ಸೃಷ್ಟಿಯ ಸ್ವರೂಪವು. ಸೃಷ್ಟಿಯು ಜನ ಜನ್ಯವಾದ ತಡೆಗಳನ್ನೊಡೆದು, ಮುಂದುವರಿಯುವುದು. ಈಕೆಯು ಕಷ್ಟಸುಖಗಳನ್ನು ಆತ್ಮಾನುಭವ ಮಾಡಿಕೊಂಡು. ಆಧಾರವಿಲ್ಲದವರ ಪಕ್ಷವಹಿಸಿದಳು. ಈಕೆಯ ಸೀಸದ ಕಡ್ಡಿಯು ಆ ಆರ್ತರಿಗೆ ಹಾದಿ ಮಾಡಿಕೊಡುವ ಖಡ್ಗದಂತಿರುವುದು. ಇಷ್ಟು ಮಾತ್ರವಲ್ಲ! ಮನದೊಳಗೆ ಮಲಗಿ ನಿದ್ದೆ ಮಾಡುವ ಆತ್ಮನನ್ನು ತಟ್ಟಿ ಎಬ್ಬಿಸಿ, ಜಾತಿ ಮತಕಾಲವನ್ನರಿಯದ ಸೃಷ್ಟಿಕರ್ತನ ಆಶಯವನ್ನು ನೆನಪು ಮಾಡಿಕೊಡುವ ಸಾಮರ್ಥ್ಯವುಳ್ಳದಾಗಿರುವುದು. ಈಕೆಯ ಕೃತಿಗಳೂ, ಜೀವನವೂ ''ಪ್ರಾಣಿಗಳಿರಾ! ನನ್ನ ಘಾಯದಿಂದ ನಿಮ್ಮ ರಕ್ತಸ್ರಾವವಾಗುವುದು'' ಎಂದು ರೋದನ ಮಾಡುವುದು ಮಾತ್ರವಲ್ಲದೆ ''ಪ್ರೀತಿ ಮತ್ತು ಸಾವು ಎಲ್ಲರ ಹಣೆಯ ಬರಹವು'' ಎಂದು ತಿಳಿಸುತ್ತಿರುವುವು.

ಈಕೆಯು ಬಾಲ್ಯದಲ್ಲಿ ಅಂಕುರಗೊಂಡ ಧ್ಯೇಯವನ್ನು ಕಡೆಯವರೆಗೆ ಬದಲಾಯಿಸಲಿಲ್ಲ. ಹೆಸರರಿಯದ ಸ್ಥಿತಿಯಲ್ಲೂ ಅಸದೃಶ ಯಶಸ್ಸನ್ನು ಪಡೆದು ಜನಾಂಗದಿಂದ ಮೇರೆ ಮೀರಿದ ಒಪ್ಪಿಗೆ ಹೊಗಳಿಕೆಗಳನ್ನು ಪಡೆದಾಗಲೂ ತನ್ನ ಮನೋನಿಶ್ಚಯವನ್ನು ಈಕೆಯ ಬದಲುಮಾಡಲಿಲ್ಲ ! ಕ್ರಮ ಕ್ರಮವಾಗಿ ಈಕೆಯ ಉದ್ಯೋಗದ ಶಿಸ್ತು, ಪ್ರಪಂಚಾನುಭವವೂ, ಕಲೆಯೂ, ಪೂರ್ಣತೆಯನ್ನು ಪಡೆಯುತ್ತ ಬಂದಿತಲ್ಲದೆ ಯಾವ ಮಾರ್ಪಾಟನ್ನೂ ಪಡೆಯಲಿಲ್ಲ !

ಒಬ್ಬೊಬ್ಬ ಕಲಾವಿದರಲ್ಲಿ ಒಂದೊಂದು ಬಗೆಯ ಧ್ಯೇಯಗಳು ಮೊಳಕೆಗೊಂಡು ಬೆಳೆಯುವುದೇಕೆಂಬುದಕ್ಕೆ ಕಾರಣವನ್ನು ಯಾರೂ ನಿರ್ಧರಿಸಲಾರರು. ಕಲಾವಿದಳಾದ ಈ ಕ್ಯಾಥೇಕೋಲ್ವಿಟ್ಸ್‌ಗಳು ಪ್ರಪಂಚದೊಳಗಿನ ಸುಖಸಂತೋಷಗಳನ್ನು, ಅಂದಚಂದಗಳನ್ನು, ಒಳಗೊಂಡ ಆನಂದಮಯವಾದ ಚಿತ್ರಗಳನ್ನು ಹೆಸರು ಪಡೆಯುವ ಯೋಗವನ್ನು ತ್ಯಜಿಸಿ, ಈ ಬಗೆಯ ಕಷ್ಟ ಕ್ಲೇಶಗಳನ್ನು ಚಿತ್ರಿಸಲು ಏಕೆ ಮನಮಾಡಿದಳು; ಆದರವಿಲ್ಲದ ಆರ್ತರ ಪಕ್ಷವಹಿಸಿ ನಿಶ್ಚಲ ಮನದಿಂದ ವಾದಿಸತೊಡಗಲು ಕಾರಣವೇನು? ಈ ನಿರ್ಭಾಗ್ಯರ ದುಃಖ, ಸಂಕಟ, ರೋದನ ಮತ್ತು ದಂಗೆಗಳಿಂದ ತುಂಬಿದ

ದುಃಖಮಯ ಚಿತ್ರಗಳನ್ನು ಚಿತ್ರಿಸುವಂತೆ ಪ್ರೇರಿಸಿದುದಾವುದು; ಎಂಬುದನ್ನು ನಿರ್ಧರಿಸುವುದು ಅಸಾಧ್ಯವಾಗಿದೆ. ಈಕೆಯ ಬಾಲ್ಯದಲ್ಲಿ ಈ ಬಗೆಯ ಅಭಿಪ್ರಾಯಗಳನ್ನು ಬಿತ್ತಿದ್ದ ಕಲಾವಿದನಾದ ಮಾರ್ಸ್‌ಕಿಲ್ಲರ್ ಎಂಬುವರು ಪುಸ್ತಕವೊಂದರಲ್ಲಿ ಈ ಬಗೆಯಲ್ಲಿ ಬರೆದಿರುವರು. ''ಎಲ್ಲ ಆಲೇಖ್ಯಕಾರರೂ (ಚಿತ್ರ ಬರೆಯುವವರು) ದುಃಸ್ಥಿತಿ ಪರಿಹಾಸ್ಯ, ವ್ಯಂಗ್ಯ, ಈ ಮಾರ್ಗ ಹಿಡಿದು, ತಮ್ಮ ಕಾರ್ಯದಲ್ಲಿ ನೈಪುಣ್ಯವನ್ನು ಸಂಪಾದಿಸುವರು. ತಮ್ಮ ಚಿತ್ರಗಳಲ್ಲಿ ಉಗ್ರತೆ, ಕಾಠಿಣ್ಯ ಮತ್ತು ದುಃಸ್ಥಿತಿ ಇವುಗಳನ್ನು ಹೊರಸೂಸುವರು. ''ಪ್ರಪಂಚದಲ್ಲಿ ಈ ಬಗೆಯಲ್ಲಿ ಇರಬಾರದು'' ಎಂಬುದನ್ನು ಎಲ್ಲೆಲ್ಲಿಯೂ ಒಡೆದು ಮೂಡಿದಂತೆ ತೋರಿಸುವರು. ಇವರು ತಮ್ಮ ಸೀಸದ ಲೇಖನಿಯಿಂದಲೇ ವಿಮರ್ಶಿಸುವರು. ವರ್ಣಚಿತ್ರಕಾರನಿಗೂ ಆಲೇಖ್ಯಕಾರನಿಗೂ ವ್ಯತ್ಯಾಸವುಂಟು. ವರ್ಣಚಿತ್ರಗಾರನು ಆಕಾರ, ಭಾವ, ಬಣ್ಣ ಇವುಗಳನ್ನು ವಸ್ತುಗಳಲ್ಲಿ ಕಂಡುಬರುವಂತೆ ಪ್ರತಿಬಿಂಬಿಸುವನು, ಚಿತ್ರಪಠವು ಅಂದವಾಗಿ ಕಂಡುಬರುವಂತೆ ಮಾಡುವನು. ಆದರೆ ವಿಮರ್ಶನ ದೃಷ್ಟಿಯಿಂದ ಬಣ್ಣಿಸುವುದಿಲ್ಲ. ಇದು ನಿಜರೂಪವಿರಬಹುದು. ವಿಮರ್ಶೆಯಾಗಬಹುದು. ಏನೇ ಆದರೂ ವ್ಯತಿರೇಕವಲ್ಲವು. ಈ ವರ್ಣಚಿತ್ರಗಳಲ್ಲಿ ''ಹೀಗೆ ಇದೆ'' ಅಥವ ''ಹೀಗೆ ಇರಬೇಕು'' ಎಂದು ತಿಳಿಸುವುದು. ವರ್ಣಶಿಲ್ಪಿಯ ಮನಸ್ಸಿನ ಮೇಲೆ ದೈವಿಕ ಭಾವನೆಗಳೊ, ತನಗೆ ತೋರಿದ ಆದರವುಳ್ಳ ಒಂದು ದೈಹಿಕ ಸೌಂದರ್ಯವೂ ಯಾವಾಗಲೂ ಆದಿಪತ್ಯ ಮಾಡುತ್ತಿರುವುದು. ಆಲೇಖ್ಯಕಾರನಿಗೆ ಈಬಗೆಯ ಶೃಂಖಲೆಗಳಿರುವುದಿಲ್ಲ! ಈತನು ಭರ್ತಿಮಾಡಲು ಅಸಾಧ್ಯವಾದ ಕೊರಕಲಿನಂತಿರುವ; ಕೆಲಸ ಮಾಡಬೇಕೆಂಬ ದೃಢಸಂಕಲ್ಪಕ್ಕೂ ಈ ಸಂಕಲ್ಪವನ್ನು ಸಾಧಿಸುವ ಸಾಮರ್ಥ್ಯಕ್ಕೂ ಮಧ್ಯದಲ್ಲಿ ನಿಂತು ಸಹಾಯಕನಾಗುವನು. ಇದರ ಸಾಧನೆಗಾಗಿ ಸರ್ವದಾ ಹಂಬಲಿಸುವನು. ಈ ಪರಿಯಲ್ಲಿ ನಾನಾಶಕ್ತಿಗಳ ಸಂಘರ್ಷದ ಎದುರಿನಲ್ಲಿ ಆತ್ಮ ಸಮರ್ಪಣೆ ಮಾಡುವುದೊಂದೇ ಆತನಿಗೆ ಉಳಿದಿರುವುದು''

ಮೇಲಿನ ಕಾರಣಗಳು ಪ್ರಪಂಚದ ದುಃಸ್ಥಿತಿಯನ್ನು ಅಥವ ಮುಂದಿನ ಮಂಗಳದಿನಗಳನ್ನು ತೋರಿಕೊಡುವ ಹಾದಿಗಳಾದವು. ಆದರೆ ಅಂತರಾತ್ಮವನ್ನು ಎಚ್ಚರಗೊಳಿಸಿ, ಸ್ಥಾಪಿತವಾಗಿದ್ದ ಹಾದಿಯನ್ನು ಬಿಟ್ಟು, ಮತ್ತೊಂದನ್ನು ಅವಲಂಬಿಸುವಂತೆ ಮಾಡಲು ಕಾರಣವೇನೆಂದು ಇದರಿಂದ ಊಹಿಸುವುದು ಸಾಧ್ಯವಿಲ್ಲ. ಮತ್ತು ಈಕೆಯೊಬ್ಬಳೇ ಈ ಹಾದಿಯನ್ನು ಹಿಡಿದು ಕಡೆತನಕ ಸಾಧಿಸಲು ಕಾರಣವೇನೆಂದು ಹೇಳುವುದು ಅಸಾಧ್ಯ. ಕಿಲಂಗರ್‌ಸ್‌ರವರ ಪುಸ್ತಕವು ಉತ್ತಮ ವಿಷಯಗಳನ್ನೊಳಗೊಂಡಿರುವುದು. ಆದರೆ ಈಕೆಯ ಮನೋನಿಶ್ಚಯಕ್ಕೆ ಕಾರಣವನ್ನು ತಿಳಿಸುವುದಿಲ್ಲ. ಈಕೆಯಲ್ಲಿ ಸುಷುಪ್ತಾವಸ್ಥೆಯಲ್ಲಿದ್ದ ಶಕ್ತಿಗಳನ್ನು ಜಾಗ್ರತೆಗೊಳಿಸಿ ಕಾರ್ಯರಂಗಕ್ಕೆಳೆಯಲು ಸಹಾಯಮಾಡಿತು. ಆದರೆ ಈ ಪುಸ್ತಕವೇ ಆಕೆಯಲ್ಲಿ ಈ ಗುಣಗಳನ್ನು ಅಂಕುರಗೊಳಿಸಿತೆಂದು ಹೇಳಲಾಗುವುದಿಲ್ಲ. ಇದಕ್ಕೆ ಕಾರಣಗಳು ಮತ್ತೆಲ್ಲಿಯೋ ಅಡಗಿರಬೇಕೆಂದು ತೋರುವುದು. ಈ ಕಾರಣಗಳು ಬೆಳಕಿಗೆ ಬರದೆಯೇ ಇರಬಹುದು. ಈ ಜನಾಂಗದ ಕಲಾವಿದಳು ತಾನು ಹೆಂಗಸಾದುದರಿಂದ ಜನರ ಸಾಮಾಜಿಕ ಕಷ್ಟಗಳನ್ನು ಚೆನ್ನಾಗಿ ಅನುಭವಮಾಡಿಕೊಳ್ಳಲು ಸಮರ್ಥಳಾದಳು. ಈಕೆಯು ವೇದನೆಗಳಿಗೂ, ಸೃಷ್ಟಿಗೂ ಯಾವ ಬಗೆಯ ವ್ಯತ್ಯಾಸವನ್ನೂ ಕಂಡವಳಲ್ಲ! ಸುಲಭದಲ್ಲಿ ಎಲ್ಲ ಸ್ತ್ರೀಯರೊಡನೆ ತಾದಾತ್ಮ್ಯಭಾವವನ್ನನುಭವಿಸಬಲ್ಲವಳು. ಈ ಬಗೆಯಲ್ಲಿ ನಾವು ಕಾರಣವನ್ನು ಹುಡುಕುತ್ತ ಹೋದಲ್ಲಿ ಮತ್ತೊಂದು ಮುಖ್ಯ ಕಾರಣವು ಕಂಡುಬರುವುದು. ಆಕೆಯ ಬಾಲ್ಯದಲ್ಲಿ ಹೊರಬಿದ್ದ ಚಿತ್ರಗಳಲ್ಲಿ ಜನಾಂಗದ ತಾಳ್ಮೆ, ಬಲ, ದುಃಸ್ಥಿತಿ ಇವು ಬಲು ಸಾಮಾನ್ಯವಾಗಿ ಚಿತ್ರವಾಗುತ್ತಿದ್ದುದು, ಆಕೆಯ ಮನದಲ್ಲಿ ಚೆನ್ನಾಗಿ ನಾಟಿ ಹೊಸ ಪರಿಣಾಮವನ್ನು ಮಾಡಿದ್ದಿತು. ಕ್ರಾಂತಿಯು ಭಾವನೆಗಳಿಂದ ಕೂಡಿದ ಈಕೆಯ ತಂದೆ ತಾತಂದರಿಂದ ಕೂಡ ಈಕೆಯ ಈ ಬಗೆಯ ಕಲೆಗೆ ಸಹಾಯಗಳಾಗಿವೆಯೆಂದು ತೋರುವುದು.

ಈಕೆಯ ತಾತನು ಕೊರ್ಯಿಸಬರ್ಗ್ ವಿಶ್ವವಿದ್ಯಾನಿಲಯದಲ್ಲಿ ಒಬ್ಬ ದೊಡ್ಡ ಪಂಡಿತನು. ಪೂರ್ವಾಚಾರ ಶೃಂಖಲೆಗಳನ್ನು ಕಿತ್ತೊಗೆದು, ಸರ್ವಸಮಭಾವದ ಹೊಸಮತಸ್ಥಾಪನೆಯಲ್ಲಿ ಮುಖ್ಯ ಭಾಗವನ್ನು ವಹಿಸಿ, ಸರಕಾರದ ಆಗ್ರಹಕ್ಕೆ ಪಾತ್ರನಾದನು. ಈತನು ವಿಶ್ವವಿದ್ಯಾನಿಲಯದಲ್ಲಿ ಕೊಟ್ಟ ಭಾಷಣಗಳು ರಾಜದ್ರೋಹದ ನೆವದಿಂದ ಬಹಿಷ್ಕರಿಸಲಾದುವು. ಕಟ್ಟ ಕಡೆಗೆ ಸೆರೆಮನೆಯನ್ನು ಸೇರಬೇಕಾಯಿತು. (ಈಕೆಯ ತಂದೆಯು ಸಾಧಾರಣ ಮನುಷ್ಯ! ಈತನು ಒಬ್ಬ ಕರ್ಮಗಾರನು. 1848ನೆಯ ಸಂವತ್ಸರದಲ್ಲಿ ನಡೆದ ಕ್ರಾಂತಿಯಲ್ಲಿ ಮುಖ್ಯಭಾಗವನ್ನು ವಹಿಸಿದ ಮಹಾಪುರಷನು). ''ಪ್ರಪಂಚದಲ್ಲಿ ಸಮಾಜಸೇವೆಯು ಪ್ರತಿಯೊಬ್ಬ ತರುಣನ ಕರ್ತವ್ಯ. ತಮ್ಮ ಚತುರತೆಯನ್ನು ಆರ್ತರ ಸೇವೆಯಲ್ಲಿ ಸದ್ವಿನಿಯೋಗ ಪಡಿಸುವುದು ಅತ್ಯಾವಶ್ಯಕ'' ಎಂಬ ತಂದೆ ಹಿತಬೋಧೆಯನ್ನು ತನ್ನ ಮಕ್ಕಳಿಗೆ ಆಗಾಗ ತಿಳಿಸುತ್ತಿದ್ದನು. ಈತನು ದೂರದೃಷ್ಟಿಯುಳ್ಳವನು. ಹೆಂಗಸರಿಗೆ ಅಡಿಗೆ, ಊಟ, ಮಕ್ಕಳು ಮರಿಗಳು, ದೇವಾಲಯ ಇವೇ ಸರ್ವಸ್ವವು ಎಂದು ತಿಳಿದಿದ್ದ ಆ ಯುಗದಲ್ಲಿ ಈತನು ತನ್ನ ಮಗಳಿಗೆ ಪ್ರೌಢ ಶಿಕ್ಷಣವನ್ನಿತ್ತನು. (ಕೊರ್ಯಿಸ್‌ಬರ್ಗ್, ಬರ್ಲಿ, ಮ್ಯೂನಿಚ್ ಮುಂತಾದ ಹೆಸರಾದ ವಿಶ್ವವಿದ್ಯಾನಿಲಯಗಳಲ್ಲಿ ಶಿಕ್ಷಣ ಕೊಡಿಸಿದನು.) ಈ ಕಲಾವಿದಳು ಮಗುವಾಗಿದ್ದಾಗ, ತಂದೆಯು ಆಕೆಯನ್ನು ತನ್ನ ಕಾರ್ಯಾಲಯಕ್ಕೆ ಕರೆದೊಯ್ಯುತ್ತಿದ್ದನು. ಅಲ್ಲಿ ನಾನಾ ಬಗೆಯ ಪ್ರಾಣಿಗಳಿಂದಲೂ ಮನುಷ್ಯರು ಮತ್ತು ಮೆರವಣಿಗೆಗಳಿಂದಲೂ, ತುಂಬಿದ ತೆಳುವಾದ ಪಟ್ಟಿಯನ್ನು ಆಕೆಯ ಆನಂದಕ್ಕಾಗಿ ಕೊಡುತ್ತಿದ್ದನು.

ಕಲಾಂಕುರ ರೂಪದಲ್ಲಿದ್ದ ಈಕೆಯು ಅವುಗಳನ್ನು ಬಹು ಉತ್ಸಾಹದಿಂದ ಪರೀಕ್ಷಿಸಿ, ನಕಲೆತ್ತುತ್ತಿದ್ದಳು. ಈ ಬಗೆಯಲ್ಲಿ ಮನದೊಳಗೆ ಅಡಗಿ ಅಂಕುರ ರೂಪದಲ್ಲಿದ್ದ ಆಕೆಯ ಅಸಾಧಾರಣ ತೇಜವನ್ನು ಪ್ರಕಾಶಗೊಳಿಸಲು ಸಹಾಯಕನಾದನು.

ಆಕೆಗೆ ಮಾತನಾಡುವುದು ಬಂದೊಡನೆಯೇ ("ಅಂಗಿಯಹಾಡು" ಎಂಬುದನ್ನು ಕಲಿಸಿಕೊಟ್ಟನು. ಮುಂದೆ ಈಕೆಯು ಈ ಹಾಡಿನ ಆಧಾರದಮೇಲೆ ಉತ್ತಮವಾದ ಚಿತ್ರವೊಂದನ್ನು ಬರೆದಳು. ತೊಟ್ಟಿಲಿನ ಪಕ್ಕದಲ್ಲಿ ಕುಳಿತು, ಅಂಗಿಯೊಂದನ್ನು ಹೊಲಿದು, ಸಾಕಾಗಿ ಆಯಾಸದಿಂದ ಬಳಲಿ ಚೌಕಿಯಮೇಲೆ ಒರಗಿ ಮಲಗಿದ ತಾಯಿಯ ಚಿತ್ರವನ್ನು ಚಿತ್ರಿಸಿದಳು.)

ಈಕೆಯ ಇಪ್ಪತ್ತನೆಯ ವಯಸ್ಸಿನಲ್ಲಿ ಉತ್ತಮ ವೈದ್ಯನೂ, ಸಮಾಜ ಸುಧಾರಕನೂ ಆದ ಡಾ। ಕೋಲ್‌ವಿಟ್ಸ್‌ರವನ್ನು ವಿವಾಹಿತಳಾದಳು. ಈತನು ಬರ್ಲಿ ವಿಶ್ವವಿದ್ಯಾಲಯದಲ್ಲಿ ಪದವೀಧರನಾಗಿ ವೈದ್ಯವೃತ್ತಿಯನ್ನವಲಂಬಿಸಿದನು. ಕೂಲಿಗಾರನಿಗೆ ಸಹಾಯಕನಾಗಿ ಅನೇಕ ವೇಳೆಗಳಲ್ಲಿ ದ್ರವಾಪೇಕ್ಷೆಯಿಲ್ಲದೆ ಪ್ರೀತಿಯಿಂದ ಉಚಿತವಾಗಿ ಚಿಕಿತ್ಸೆ ಮಾಡುತ್ತಿದ್ದನು. ಈತನ ಚಿಕ್ಕವಯಸ್ಸಿನ ಹೆಂಡತಿಯಾದ ಕ್ಯಾಥೆಕೋಲ್‌ವಿಟ್ಸ್‌ಳು ಈ ರೋಗಿಗಳಿಗೆ ಆದರದಿಂದ ಸೇವೆ ಮಾಡುತ್ತಿದ್ದಳು. ಅನೇಕ ವೇಳೆಗಳಲ್ಲಿ ತನ್ನ ಚಿತ್ರಕ್ಕೆ ಆ ರೋಗಿಗಳನ್ನೇ ಆಧಾರವಾಗಿ ಇಟ್ಟುಕೊಂಡಿರುವಳು. ತಮ್ಮ ಈ ಪುಟ್ಟ ಸಂಸಾರದಲ್ಲಿ ಈರ್ವರು ಮಕ್ಕಳನ್ನು ಸಾಕಿಸಲಹಿದಳು. ಈ ಮನೆಯು ಒಂದು ಚಿತ್ರಶಾಲೆಯಾಗಿ ಇಲ್ಲಿಯೇ ಈಕೆಯು ಪ್ರಖ್ಯಾತಿಗೆ ಬಂದಳು. ಯಾವಾಕೆಯ ಕಲೆಯು ಆವೇಶ, ಆಕ್ರೋಶ, ಪ್ರತಿಭಟನೆಗಳಿಂದ ರಾಜ್ಯವನ್ನೇ ಪ್ರಚಲಗೊಳಿಸಿತೋ, ಆಕೆಯು ಶಾಂತಮೂರ್ತಿಯು. ಈಕೆಯ ಜೀವಿತವಾದರೂ ಸಾಮಾನ್ಯ ಕೆಲಸಗಾರಳಂತೆ ಸರ್ವಸಾಮಾನ್ಯವಾದುದು. ಈಕೆಯ ಮುಗುಳು ನಗೆಯು ಮೃದುಮಧುರವಾದುದು. ಈಕೆಯು ಆನಂದದ ಮತ್ತು ತೃಪ್ತಿಯ ಮೂರ್ತಿಮಂತಳು. ನಿಜವಾಗಿಯೂ ಮಹಿಮೆಯುತ ಆತ್ಮಳಾದ ಈಕೆಗೆ ಬಾಹ್ಯದ ವೇಷಭೂಷಣಗಳು ಅತ್ಯಲ್ಪ ಬೆಲೆಯಾದುವು. ಮನದೊಳಗಿನ ಮಾನವೀಯ ಮತ್ತು ದೈವಿಕ ಭಾವನೆಗಳನ್ನು ಪ್ರಜ್ವಲಗೊಳಿಸಿದ ಮಹಿಮಳು ಈಕೆಯು. ಮಾನವ ವ್ಯಕ್ತಿಯು ಈ ಕಾರ್ಯದಲ್ಲಿ ಯಶಸ್ವಿಯಾದೊಡನೆಯೇ ಈ ಬಾಹ್ಯವಿಡಂಬಕ್ಕೆ ಸಂಬಂಧಪಟ್ಟ ವಸ್ತುಗಳಿಗೆ ಬೆಲೆಯಿಲ್ಲವು.

1898ರಲ್ಲಿ ಬರ್ಲಿನಗರದಲ್ಲಿ ನಡೆದ ಕಲಾ ಪ್ರದರ್ಶನ ಸಂದರ್ಭದಲ್ಲಿ ಕ್ಯಾಥೇಕೋಲ್ವಿಟ್ಸಳು ಯೂರೋಪಿನ ಕಲಾ ಪ್ರಪಂಚದ ಮುಂದೆಬಂದಳು. "ನೆಯ್ಗಾರರ ಪ್ರತಿಭಟನೆ" ಎಂಬ ಆರು ಚಿತ್ರಪ್ರತಿಗಳು ಎಲ್ಲರ ಮೆಚ್ಚಿಗೆಯನ್ನೂ ಪಡೆದು, ಪ್ರದರ್ಶನದ ಪದಕವನ್ನು ಬಹುಮಾನ ಪಡೆಯಿತು. ಈ ಚಿತ್ರಗಳು ತಂದೆಯ ಸ್ಮಾರಕಸಮರ್ಪಣೆಗಳಾಗಿರುವುವು. ಈ ಮೊಟ್ಟಮೊದಲಿನ ಚಿತ್ರಗಳಲ್ಲಿಯೇ ಆಕೆಯ ಸಹಜ ಸ್ವಭಾವ ಮತ್ತು ಸಾಮರ್ಥ್ಯವನ್ನು ವ್ಯಕ್ತಗೊಳಿಸಿರುವಳು. ಪಾಶ್ಚಿಮಾತ್ಯ ಕಲಾವಿಮರ್ಶಕರಲ್ಲಿ ಹೆಸರಾದ ಡಾಕ್ಟರ್ ಜುಲಿಯಸ್ ಯಲಿಯಾಸ್, ಎಂಬಾತನು "ದೃಢವೂ ಸಾಮರ್ಥ್ಯವೂ ಉಳ್ಳ ಕೈವಾಡವೂ; ಬುದ್ಧಿಭ್ರಂಶೆಯಿಲ್ಲದ, ಮಾನವಜಾತಿಗೆ ವ್ಯಕ್ತವಾಗುವಂತೆ ಬಿಡಿಸಿ ತೋರಿಸಿದ ತೋರಿಕೆಯೂ; ಬಹು ಸುಲಲಿತವೂ ಪರಿಶುದ್ಧವೂ ಆದ ರೇಖೆಗಳಿಂದ ಕೂಡಿದ ದಿವ್ಯದೃಷ್ಟಿಯೇ ಈ ರೂಪದಲ್ಲಿ ಚಿತ್ರಿತವಾಗಿದೆ" ಎಂದು ಹೊಗಳಿರುವರು. "ನೆಯ್ಗಾರರ ಪ್ರತಿಭಟನೆಯು" ಒಂದು ನಾಟಕದ ಆಧಾರದಿಂದ ಬರೆಯಲ್ಪಟ್ಟುದು. ಬರ್ಲಿನಗರದಲ್ಲಿ 1893 ಪ್ರದರ್ಶಿಸಲ್ಪಟ್ಟ ಈ ಚಿತ್ರವು ಕೂಡಲೆ ಸರಕಾರದಿಂದ ನಿಷೇಧಿಸಲ್ಪಟ್ಟಿತ್ತು. ಆದರೂ ಈ ಯುವತಿ ಕಲಾವಿದಳು ಇದರ ಮೊದಲನೆಯ ಆವೃತ್ತಿಯ ಪ್ರಚಾರವನ್ನು ಕಣ್ಣಾರೆ ಕಂಡು, ನೇಯ್ಗಾರರ ಕ್ಲೇಶ ಮತ್ತು ಕಷ್ಟಗಳನ್ನು ಮನವರಿಕೆ ಮಾಡಿಕೊಂಡು ಮುಂದೆ ನಾಲ್ಕಾರು ವರುಷಗಳು ಅವಿಚ್ಛಿನ್ನವಾಗಿ ಶ್ರಮಪಡಲು ಉತ್ತೇಜನ ಹೊಂದಿದಳು.

16ನೆಯ ಶತಮಾನದ ಜರ್ಮನಿಯ ಕೃಷಿಗಾರರ ಯುದ್ಧದ ಗೋಳನ್ನು ತೋರಿಸಿದ 7 ಚಿತ್ರಗಳೂ ಹೆಸರಾದ ಕವಿಗಳಿಂದ ರಚಿಸಲ್ಪಟ್ಟ ನಾಟಕಗಳ ಆಧಾರದಿಂದ ಬರೆಯಲ್ಪಟ್ಟವು. ಈ ಚಿತ್ರಗಳ ಭಾವಗಳು ಮನಕರಗಿಸುವಂತೆಯೂ, ಹೃದಯಭೇದಕಪರಿಣಾಮವುಳ್ಳವಾಗಿಯೂ ಇರುವುವು. ಈ ಚಿತ್ರಗಳು ಗಾಂಭೀರ್ಯಯುಕ್ತವಾದ, ಕೊನೆಯಿಲ್ಲದ ಮಾಯೆಯಂತಿರುವುವು. ಜನರು ಕಷ್ಟಗಳನ್ನನುಭವಿಸಿ, ಪಶುವಿಗಿಂತ ಕಡೆಯಾದ ಅವಸ್ಥೆಯನ್ನು ತಡೆಯಲಾರದೆ ತಿರುಗಿಬಿದ್ದ ಕಾಲದ ಪರಿಸ್ಥಿತಿಯ ಪರಮಾವಸ್ಥೆಯ ರೂಪವನ್ನು ಸಹಜವಾಗಿ ತೋರಿಸಿಕೊಡುತ್ತಿರುವುವು. ಪ್ರೇಕ್ಷಕರು ಇವುಗಳಲ್ಲಿನ ಚಿತ್ರಚಮತ್ಕಾರಗಳನ್ನು ಮೆಚ್ಚುವುದಕ್ಕೆ ಬದಲು ಆ ರೈತರೊಡನೆ ದುಃಖಿಸುವನು. ಕಡೆಗೆ ತಾನೂ ಅವರೊಡನೆ ಕಲೆತು, ಅವರ ಸಾಹಸಕಾರ್ಯದೊಡನೆ ಬೆರೆಯುವನು. ಈ ಬಗೆಯ ಸೃಷ್ಟಿಯನ್ನು ನೋಡಿದವನು "ಪಶ್ಚಾತ್ತಾಪ ಮತ್ತು ಭಯಾನಕಳಿಗೆ, ಈ ಬಗೆಯ ರೂಪಸೃಷ್ಟಿಯಿತ್ತ, ಈಕೆಯ ಕೊನೆಯಮೊದಲಿಲ್ಲದ ಊಹೆಯ ಮಹಿಮೆಯಂತಹುದು! ಇಂತಹ ಮಹಿಮೆಯ ಮೂಲವಾವುದು!" ಎಂದು ಬೆರಗಾಗುವನು.

ಕಲಾವಿದಳ ಈ ಮನೋನಿಶ್ಚಯಕ್ಕೆ ಆಕೆಯಲ್ಲಿ ಅಂಕುರ ರೂಪದಲ್ಲಿದ್ದು, ಅಭಿವೃದ್ಧಿಯಾದ ಸ್ವಾಭಾವಿಕ ಗುಣಗಳೇ ಮುಖ್ಯಕಾರಣಗಳು. (ಈಕೆಯನ್ನು ತಿಳಿಯುವುದೆಂದರೆ ಈಕೆಯ ಉತ್ತಮ ಚಿತ್ರಗಳಲ್ಲೊಂದಾದ, "ಸ್ಫೋಟನ" ಎಂಬ ಚಿತ್ರದ ಮರ್ಮವನ್ನು ತಿಳಿಯುವುದು.) ಬಡರೈತರು ಕಷ್ಟಸಹಿಸಲಾರದೆ ತಿರುಗಿಬೀಳುವುದನ್ನು ಸೂಚಿಸುವ ಈ ಚಿತ್ರದಲ್ಲಿ ಕೈಗಳನ್ನೆತ್ತಿ ಕಣ್ಣೀರು ಸುರಿಸುತ್ತ ಇರುವ ಹೆಂಗಸೊಬ್ಬಳ ಚಿತ್ರವು ಚಿತ್ರಿತವಾಗಿದೆ. ಈ ಹೆಂಗಸು ಕ್ಯಾಥೇಕೋಲ್‌ವಿಟ್ಸಳಲ್ಲದೆ ಮತ್ತೆ ಬೇರೆಯಿಲ್ಲ. ಈ ಚಿತ್ರವೊಂದರಲ್ಲಿ ಮಾತ್ರವಲ್ಲದೆ ಈಕೆಯ ಚಿತ್ರಗಳಲ್ಲೆಲ್ಲಾ ಆಕೆಯ ಸಂತಾಪದಿಂದ ಸಂತಪ್ತವಾದ ವ್ಯಕ್ತಿಯೂ, ಮುಖವೂ ಪ್ರಧಾನರೂಪಗೊಂಡಿರುವುದು. ಕಲಾವಿದರಲ್ಲಿ ಅಪೂರ್ವವಾಗಿ ಕಂಡುಬರುವ; ತಮ್ಮ ಕಲ್ಪನಾಕೃತಿಗಳನ್ನು ತನ್ನ ರಕ್ತಕಣಗಳಿಂದಲೇ ಸೃಷ್ಟಿಸಿ, ತಾದಾತ್ಮ್ಯಭಾವವನ್ನು ಅನುಭವಿಸುವ ಗುಣವನ್ನು ಈಕೆಯು ತನ್ನ ಕೃತಿಗಳಲ್ಲಿ ಚೆನ್ನಾಗಿ ವ್ಯಕ್ತಗೊಳಿಸಿರುವಳು. ಈಕೆಯು ಕೆಲವು ಚಿತ್ರಗಳನ್ನು ಮಾತ್ರವೇ ಸೃಷ್ಟಿಸಿದರೂ ಕಲಾ ಪ್ರಪಂಚದಲ್ಲಿ

ಶಾಶ್ವತವೂ, ಅಸದೃಶವೂ ಆದ ಕೀರ್ತಿಯನ್ನು ಪಡೆದಿರುವಳೆಂದು ಕಲಾವಿದರು ಈಕೆಯನ್ನು ಹೊಗಳಿರುವರು. ತಾನು ಕಾರ್ಯಕ್ಕಾರಂಭಿಸಿದ ಮೊದಲಿನ ಇಪ್ಪತ್ತು ವರುಷಗಳಲ್ಲಿ ಯುದ್ಧಾರಂಭವಾಗುವುದಕ್ಕೆ ಪೂರ್ವದಲ್ಲಿ ತನ್ನ ಭಾವನೆಗಳನ್ನು ಕಾವ್ಯಗಳಿಂದಲೂ, ಚರಿತ್ರೆಗಳಿಂದಲೂ ಪಡೆದು ಕಲಾರಂಗದಲ್ಲಿ ಕಾರ್ಯಮಾಡಲಾರಂಭಿಸಿದಳು. ವಿಷಯವನ್ನು ಎಲ್ಲಿಂದ ಆರಿಸಿದರೂ ಈ ತರುಣಿಯ ಕೃತಿಗಳೆಲ್ಲವೂ ಪ್ರತಿಭಟನೆ, ಉದ್ಘಟತನ, ಕ್ರಾಂತಿ ಇವುಗಳಿಂದ ತುಂಬಿದ್ದವು. ಯುದ್ಧಾರಂಭವಾಗಿ ಭಯಾನಕ ಪರಿಣಾಮಗಳುಂಟಾದೊಡನೆ ತತ್ಸಂಬಂಧದ ನಾನಾಬಗೆಯ ಗ್ರಂಥಗಳೂ, ಕಾವ್ಯಗಳೂ ಹೊರಬಿದ್ದವು. ಇದರಂತೆಯೇ ಈಕೆಯೂ ಮತ್ತಷ್ಟು ಭಯಾನಕ ಕೃತಿಗಳನ್ನೂ ಸೃಷ್ಟಿಸಿದಳು. ಉತ್ತೇಜನರೂಪವಾದ ಚಿತ್ರಗಳನ್ನು ಬರೆಯುವುದನ್ನು ಬಿಟ್ಟು; ಜನಸಾಮಾನ್ಯದ ತಾಳ್ಮೆ, ನಿತ್ಯದ ಗೋಳು, ಸಂಕಟಕ್ಕೆ ಸಿಕ್ಕಿದ ಸ್ತ್ರೀಯರು ನಿಗ್ರಹಿಸಲಸಾಧ್ಯವಾದ ದುರದೃಷ್ಟದೊಂದಿಗೆ ಹೋರಾಡುವ ಗೋಳು, ದಾರಿದ್ರ್ಯ, ಖಾಯಿಲೆ, ಸಾವು ಇವೆಲ್ಲವನ್ನೂ ಚಿತ್ರಿಸುತ್ತ ಬಂದಳು. ಯುದ್ಧರಂಗದಿಂದ ಬರಬಹುದಾದ ಸಮಾಚಾರಕ್ಕಾಗಿ ನಿತ್ಯವೂ ಕಾದು, ಬೆಂದು ಬೇಗುದಿಗೊಳ್ಳುತ್ತಿರುವ ಸ್ತ್ರೀರೂಪದ ಪಠವೊಂದನ್ನು ತಯಾರಿಸಿದಳು. ಈ ಚಿತ್ರದಲ್ಲಿ ಆಕೆಯು ಕೈಗಳನ್ನು ಅಡ್ಡಗಟ್ಟಿ ಕಣ್ಣುಮುಚ್ಚಿ ಮಿತಿಯಿಲ್ಲದಷ್ಟು ಕಾದು ನಿರಾಶಳಾಗಿ, ಜೋಲು ಮೊಗದಿಂದ ಕೂಡಿ ತನ್ನ ನಿರಾಶೆಯನ್ನು ಬಿಚ್ಚಿ ಹೇಳುವಂತೆ ಚಿತ್ರಿಸಿದ್ದಳು. ಈ ಚಿತ್ರವು ಒಬ್ಬ ಜರ್ಮನಿಸ್ತ್ರೀಯ ರೂಪತಾಳಿದ್ದಿತು. ಆದರೇನು! ಆಕೆಯು ಹೆಂಗಸಿನ ಕುಲಕ್ಕೆ ಸೇರಿದವಳು! ಈಕೆಯ ಚಿತ್ರಗಳು ಜಾತಿ, ಮತ, ದೇಶಗಳ ಭೇದವನ್ನರಿಯವು. ಈಕೆಯು ಬರೆದ ಪ್ರತಾಪಯುತ ಪ್ರಕಟನ ಪಠಗಳಲ್ಲೊಂದಕ್ಕೆ "ರೊಟ್ಟಿ" ಎಂಬ ಪುಟ್ಟ ಹೆಸರಿತ್ತಳು. ಈ ಚಿತ್ರದಲ್ಲಿ ಹೊಟ್ಟೆಗಿಲ್ಲದೆ ಹಾಹಾಕಾರಪಡುವ ಬಾಲಕರಿಬ್ಬರು ತಮ್ಮ ತಾಯಿಯ ಬಟ್ಟೆಯನ್ನು ಹರಿಯುತ್ತಾ ಹಸಿದ ಹೊಟ್ಟೆಗೆ ಆಹಾರ ಕೊಡೆಂದು ಪೀಡಿಸುತ್ತಿರುವುವು. ಮತ್ತೊಂದು ಪಠದಲ್ಲಿ ಯುದ್ಧದಲ್ಲಿ ಮುಗಿದ ಮೇಲೆ ಹುಟ್ಟಿದ ಮಕ್ಕಳನ್ನು ಚಿತ್ರಿಸಿರುವಳು. ಹೊಟ್ಟೆಗಿಲ್ಲದೆ ಬತ್ತಿಬಾಡಿ, ಅಡಗಿಬಿದ್ದು ಯುದ್ಧದಿಂದ ಆಘಾತದಿಂದ ಪ್ರಪಂಚವನ್ನು ವಿಸ್ಮಯದಿಂದ ನೋಡುತ್ತಿರುವ ಬಾಲಕರನ್ನು ಚಿತ್ರಿಸಿದ್ದಳು. ಇದಲ್ಲದೆ "ಹೆಂಗಸಿನ ಸಂಕಟವೇನು" "ನಿರ್ಗತಿಕಳಾದ ಮುದುಕಿ" ಮುಂತಾದ ಹೃದಯಭೇದಕವಾದ ಚಿತ್ರಗಳನ್ನು ತಯಾರಿಸಿರುವಳು.

ಈ ಕಾಲದಲ್ಲಿಯೇ ತಾಯಿಮಕ್ಕಳ ಕೋಮಲ ಅಂತಃಕರಣವನ್ನು ಕೂಡ ಚಿತ್ರಿಸಿರುವಳು. ಒಂದೆರಡು ವಿಷಯಗಳಲ್ಲಿ ಹೊರ್ತು ಉಳಿದ ಈ ಬಗೆಯ ಚಿತ್ರಗಳಲ್ಲಿಯೂ ಪಶ್ಚಾತ್ತಾಪ, ದುಃಖ, ವಿಘಾತಗಳನ್ನು ವ್ಯಕ್ತಗೊಳಿಸಿರುವಳು. ಪ್ರೀತಿ ಮತ್ತು ಸಾವು ಎಂಬ ಚಿತ್ರಕ್ಕೆ ಯುದ್ಧದಲ್ಲಿ ಮಡಿದ ಈಕೆಯ 18 ವರುಷದ ಮಗನ ಜೀವಿತವೇ ಮೂಲಾಧಾರವೆಂದು ತೋರುವುದು. ಈಕೆಯು ಯುದ್ಧಕ್ಕೂ ತರುಣರನ್ನು ರಣರಂಗಕ್ಕೆ ಎಳೆದೊಯ್ಯುವುದಕ್ಕೂ ಬದಲಾಗಿ ಪ್ರತಿಭಟಿಸಿದಳು. ಈ ಪ್ರತಿಭಟನೆಯನ್ನು ಯುದ್ಧಾನಂತರ ಬರೆದ ಚಿತ್ರಗಳಲ್ಲಿ ವ್ಯಕ್ತಗೊಳಿಸಿರುವಳು. ಇವುಗಳ ಪೈಕಿ ಒಂದರಲ್ಲಿ ಮಗನನ್ನು ಆಲಿಂಗನಮಾಡಲು ಹಾತೊರೆಯುವ ಎದೆಯಲ್ಲಿ ಸತ್ತ ಮಗುವನ್ನು ಬಾಚಿ ತಬ್ಬಿಕೊಂಡು ರೋಧಿಸುವುದನ್ನು ತೋರಿಸಿರುವಳು.

ಇಂದು ಕ್ಯಾಥೇಕೋಲ್ ವಿಟ್ಸಳಿಗೆ 57 ವರುಷಗಳು. ಆದರೂ ಈಕೆಯು ಪ್ರತಿನಿತ್ಯದಲ್ಲಿಯೂ ಕೆಲವು ಘಂಟೆಗಳ ಕಾಲ ತನ್ನ ಚಿತ್ರಶಾಲೆಯಲ್ಲಿ ಚುರುಕಾಗಿ ಕೆಲಸ ಮಾಡುವಳು. ಚಿತ್ರಗಳನ್ನು ಬರೆಯುವುದನ್ನು, ಪಡಿಯಚ್ಚುಗಳನ್ನು ತಯಾರಿಸುವುದು ಮಾತ್ರವಲ್ಲದೆ, ಮರೆಯಲ್ಲಿ ಕುಳಿತು ಬಿಳಿಯ ಮಣ್ಣಿನಿಂದ ಮಾದರಿಗಳನ್ನು ತಯಾರಿಸುವಳು. ಅವಳಿಗೆ ತೃಪ್ತಿಯಾದಲ್ಲಿ ಅವುಗಳನ್ನು ಪ್ರದರ್ಶನಶಾಲೆಗೆ ಕಳುಹಿಸುವಳು. ಅದಕ್ಕೆ ಮೊದಲು ತನ್ನ ಮಿತ್ರರಿಗೂ ಇವುಗಳನ್ನು ತೋರಿಸುವುದಿಲ್ಲ. ಈಗ ಈಕೆಯ ತಯಾರಿಸುತ್ತಿರುವ ಕೆತ್ತನೆಯನ್ನು ಜನರಿಗೆ ತೋರಿಸುವ ಕಾಲವು ಒದಗಿಲ್ಲ. ನಗ್ನಾವಸ್ಥೆಯಲ್ಲಿ ತಾಯಿಯು ಕಾಡುಮನುಷ್ಯಳಂತೆ ಕುಳಿತು, ಸತ್ತ ಮಗುವನ್ನು ಅಪ್ಪಿಕೊಂಡು, ಮೂಕ ಪ್ರಾಣಿಗಳಿಗಿಂತಲೂ ಹೆಚ್ಚಿಗೆ ದುಃಖಿಸುತ್ತಿರುವುದು ಇವುಗಳಲ್ಲೊಂದು. ಈ ಚಿತ್ರದಲ್ಲಿನ ಸ್ತ್ರೀ ರೂಪವೂ ಚಿತ್ರಕಾರಳಾದ ಕ್ಯಾಥೇಕೋಲ್‌ವಿಟ್ಸ್‌ಳದಾಗಿರುವುದು. ಈಗಿನ ಕಾಲದ ಕಲಾವಿದರು; ಅಸದೃಶ ಕಲಾನೈಪುಣ್ಯದಿಂದ ಕೂಡಿ, ದೈಹಿಕ ರಚನೆಯನ್ನು ಬಲುದಾರಢ್ಯದಿಂದ ತೋರಿಸುವುದರಲ್ಲಿ ನಿಪುಣಳಾದ, ಈಕೆಯಿಂದ ತಯಾರಾಗುತ್ತಿರುವ ಶಿಲ್ಪವನ್ನು ಆತುರದಿಂದ ಎದುರು ನೋಡುತ್ತಿರುವರು.

ಕ್ಯಾಥೇಕೋಲ್‌ವಿಟ್ಸ್‌ಳು ತನ್ನ ಮಾರ್ಗದಲ್ಲಿ ಒಂದು ಉತ್ತಮವಾದ ಉದ್ದೇಶವುಂಟೆಂದು ಹೇಳುವಳು. ಈಕೆಯು ಜನಸಾಮಾನ್ಯದ ದುಃಸ್ಥಿತಿಯನ್ನು ಮನವರಿಕೆ ಮಾಡಿಸಿಕೊಡಲು ಜನರನ್ನು ಎಬ್ಬಿಸಿ, ಎಚ್ಚರಗೊಳಿಸಿದಳು. ಈಕೆಗೆ ಜನತೆಯ ಸೌಂದರ್ಯ ಮತ್ತು ಸೃಷ್ಟಿ ಸಾಮರ್ಥ್ಯದಲ್ಲಿ ಪೂರ್ಣಭರವಸೆಯುಂಟು. ನಿಷ್ಪೃಷ್ಟವಾದ ಸಾಮಾಜಿಕ ಗುರಿಯನ್ನಿಟ್ಟುಕೊಂಡು ಅಪನಂಬಿಕೆ, ಹಸಿವು, ಅಜ್ಞಾನ, ಇವೆಲ್ಲವನ್ನು ಧ್ವಂಸಮಾಡಿ ಜನಾಂಗದ ಉನ್ನತಿಗೆ ದಾರಿತೋರಿಸುವುದು ಸಾಧ್ಯವೆಂಬುದು ಈಕೆಯ ದೃಢನಂಬಿಕೆ. ಈ ದೃಢನಿಶ್ಚಯದ ಮೇಲೆ ತನ್ನ ಜೀವಿತದ ಪ್ರೀತಿ ಮತ್ತು ಸಾಮರ್ಥ್ಯವನ್ನೆಲ್ಲಾ ವಿನಿಯೋಗಿಸಿ, ಎದೆಗುಂದದೆ ಕಾರ್ಯಮಾಡಿದಳು. ಈಕೆಯು ತನ್ನ ಧ್ಯೇಯವನ್ನು ಎಷ್ಟರಮಟ್ಟಿಗೆ ಸಾಧಿಸಿದಳೆಂಬುದು ಕಲೆಯ ಬೆಳವಳಿಕೆಯಿಂದವಲ್ಲದೆ ಸಾಮಾಜಿಕ ಚರಿತ್ರೆಗಳಿಂದಲೂ ವ್ಯಕ್ತವಾಗುವುದು.

*** ಈ ಲೇಖನವು 1923ರಲ್ಲಿ ಬರೆಯಲ್ಪಟ್ಟುದು.**

ಪ್ರಕಟಣೆ : ಕಲಾಮಂದಿರ, ಬೆಂಗಳೂರು
ಸಂ. : ಎ. ಎನ್. ಸುಬ್ಬರಾವ್

ಪೆರುವಿನ ನೆಲದ ಮಹಿಳಾ ಹೋರಾಟ

- ನೇಮಿಚಂದ್ರ

ಮಹಿಳಾ ವಿಜ್ಞಾನಿ ಮರಿಯಾ ರೇಕಿಯನ್ನು ಹುಡುಕಿ ಪೆರುವಿನ ನೆಲದಲ್ಲಿ ಇಳಿದ ನನಗೆ, ಪೆರುವಿನ ಮಹಿಳಾ ಹೋರಾಟದ ಪರಿಚಯವಿತ್ತು. ಜನರ ಹಕ್ಕುಗಳಿಗಾಗಿ, ಮಹಿಳಾ ಸಮಾನತೆಗಾಗಿ ಹೋರಾಡಿ ಹತ್ಯೆಗೀಡಾದ ಎಲಿನಾಳ ಬದುಕು ತೆರೆದುಕೊಂಡಿತ್ತು. ಪೆರು 1980ರ ದಶಕದ ಮಧ್ಯದಿಂದ ಸಶಸ್ತ್ರ ಕ್ರಾಂತಿಕಾರಿ ಸಂಘಟನೆಯ ಹಿಡಿತದಲ್ಲಿ ನಲುಗಿ ಹೋಗಿತ್ತು. ಆ ಸಂಘಟನೆಯ ಹೆಸರು 'ಮಾವೊಯಿಸ್ಟ್ ಕಮ್ಯುನಿಸ್ಟ್ ಪಾರ್ಟಿ ಆಫ್ ಪೆರು' ಅಥವಾ 'ಶೈನಿಂಗ್ ಪಾತ್' ಎಂದು. ಶೈನಿಂಗ್ ಪಾತ್, ಪೆರುವಿನ ಪೂರ್ವ ಅರಣ್ಯ ಪ್ರದೇಶದಲ್ಲಿ ಕ್ರಾಂತಿಕಾರಿ ಬುನಾದಿ ಹಾಕಿ, ಹಿಂಸಾತ್ಮಕ ಹೋರಾಟಕ್ಕಿಳಿದಿತ್ತು. 1990ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಾಗ, ಫ್ಯುಜಿಮೊರಿ ಆರಿಸಿ ಬಂದಿದ್ದ. ಫ್ಯುಜಿಮೊರೆಯ ಆಡಳಿತ ಕಾಲದಲ್ಲಿ ಪೆರುವಿನ ರಕ್ತಸಿಕ್ತ ರಾಜಕೀಯ ಅಧ್ಯಾಯ ಬರೆಯಲ್ಪಟ್ಟಿತ್ತು. ಮಿಲಿಟರಿ ಸರ್ವಾಧಿಕಾರಿ, ಸಮೂಹ ಬಂಧನ, ಕೊಲೆ ಸಾಮಾನ್ಯವಾಗಿದ್ದವು.

ಇಲ್ಲಿಯ ಬಡತನದ ಕಹಿ, ಕಠಿಣ ಬದುಕು, ಹೆಂಗಸರೂ ಬಂದೂಕು ಹಿಡಿದು ನಿಲ್ಲುವಂತೆ, ಕ್ರಾಂತಿಕಾರಿ ಸಂಘಟನೆಗಳ ಕರೆಗೆ ಓಗೊಡುವಂತೆ ಮಾಡಿದೆ. ಮಹಿಳಾ ವಿಮೋಚನೆಯ ಕನಸನ್ನು ಮಾಡಿದ ಕ್ರಾಂತಿಕಾರಿ ಸಂಘಟನೆಗಳು ಸಾಕಷ್ಟು ಮಹಿಳೆಯರನ್ನೂ ಒಳಗೊಂಡಿದೆ. ಜಮೀನ್ದಾರಿ ಪದ್ಧತಿಯಲ್ಲಿ ಮಹಿಳೆಯ ಶೋಷಣೆ, ಅತ್ಯಾಚಾರ ಸಾಮಾನ್ಯವಾದ ಕಾರಣ, ಬಡ ರೈತಾಪಿ ಹೆಂಗಸರಿಗೆ ಈ ಕ್ರಾಂತಿಕಾರಿ ಸಂಘಟನೆಯ ಕರೆ ಆಕರ್ಷಕವಾಗಿ ಕಾಣುತ್ತದೆ. ಎಡಿತ್ ಲಾಗೋಸ್ 'ಶೈನಿಂಗ್ ಪಾತ್'ಗೆ ಸೇರಿದ ಅಂತಹ ಓರ್ವ ಮಹಿಳೆ. 1982ರಲ್ಲಿ ಕೇವಲ 19ವರ್ಷದ ಈ ಎಳೆಯ ಗೊರಿಲ್ಲಾ ಹೋರಾಟಗಾರ್ತಿ ಅಯಕುಚೋ ಜೇಲಿನಲ್ಲಿ ರಂಧ್ರ ಮಾಡಲು ತನ್ನ ತಂಡದೊಂದಿಗೆ ಬಂದಿಳಿದಳು. ಈಕೆ ತನ್ನ ತಂಡದೊಡನೆ ಜೈಲಿನ ಕೈದಿಗಳಾಗಿದ್ದ ಕ್ರಾಂತಿಕಾರಿಗಳನ್ನು ಬಿಡುಗಡೆ ಮಾಡಿಸಿದಳು, ಅಲ್ಲಿಯ ಅಸ್ತ್ರಶಸ್ತ್ರಗಳನ್ನೆಲ್ಲ ಲೂಟಿ ಮಾಡಿದಳು. ಆದರೆ ನಂತರ ಈಕೆಯನ್ನು ಪೋಲಿಸರು ಹಿಡಿದರು, ಬಯೋನೆಟ್ ತಿವಿದು ಕೊಂದರು. ಈ ಎಲ್ಲ ಕತೆಗಳನ್ನು ಕೇಳುವಾಗ ನನಗೆ 'ಎಲ್.ಟಿ.ಟಿ.ಇ.'ಯ ಮಹಿಳೆಯರೇ ನೆನಪಾಗುತ್ತಿದ್ದರು. ಧಾನುವಿನಂತಹ ಹುಡುಗಿಯರು, ಎಳೆಯ ವಯಸ್ಸಿನಿಂದಲೇ ಸರಕಾರದ ವಿರುದ್ಧದ ಕ್ರೌರ್ಯದ ಕತೆಗಳನ್ನು ಕೇಳಿ ಬೆಳೆದವರು, ಕಹಿಯನ್ನು ತುಂಬಿಕೊಂಡು ಹಿಂಸೆಯ ಹಾದಿಗೆ ಇಳಿದವರು. ಶೋಷಿತ ಹೆಣ್ಣು ಮಕ್ಕಳು, ಆದರೆ ಅವರ ಸಮಾನತೆಯ ಕನಸೇನೂ ಈ ಹಿಂಸಾತ್ಮಕ ಕ್ರಾಂತಿಯಲ್ಲಿ ವಾಸ್ತವವಾಗಲಿಲ್ಲ. ಆದರೆ ಈ ಸಂಘಟನೆಗಳೂ ಕ್ರಾಂತಿಯ ಹೆಸರಲ್ಲಿ ಇವರ ತಲೆತೊಳೆದು ಕೈಗೆ ಬಂದೂಕು ಕೊಟ್ಟು ತಮ್ಮ ಉದ್ದೇಶಕ್ಕೆ ಬಳಸಿಕೊಂಡವು.

ಪೆರುವಿನ ಮಹಿಳೆಯರು, ಜಗತ್ತಿನೆಲ್ಲ ಮಹಿಳೆಯರಂತೆ ತಮ್ಮ ಹಕ್ಕುಗಳಿಗಾಗಿ ಚರಿತ್ರೆಯುದ್ದಕ್ಕೂ ಹೋರಾಡಿದ್ದಾರೆ. ಇತ್ತೀಚಿನ ದಶಕದಲ್ಲಿ ಅವರ ಹೋರಾಟ ಮತ್ತಷ್ಟು ಶಕ್ತಿಯುತವಾಗಿದೆ. ಅನೇಕರು ತಮ್ಮ ನಾಪತ್ತೆಯಾದ, ಕೊಲ್ಲಲ್ಪಟ್ಟ, ಹಿಂಸಿಸಲ್ಪಟ್ಟ ಸಂಬಂಧಿಕರ ಪರವಾಗಿ ಹೋರಾಡುತ್ತಿದ್ದಾರೆ. ಇತರರು ಸಮುದಾಯ ಚಳುವಳಿಗಾರರಾಗಿ ಮೂಲಭೂತ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ಅನೇಕರು ನ್ಯಾಯವಾದಿಗಳಾಗಿ ಮಹಿಳೆಯರ ಹಕ್ಕುಗಳಿಗಾಗಿ ಹೋರಾಡುತ್ತಿದ್ದಾರೆ. ಮತ್ತುಳಿದವರು ಉದ್ಯೋಗದಲ್ಲಿ ಸಮಾನ ಹಕ್ಕುಗಳಿಗಾಗಿ, ಕೌಟುಂಬಿಕ ಹಿಂಸೆಯ ವಿರುದ್ಧ ಹೋರಾಡುತ್ತಿದ್ದಾರೆ. ಜಗತ್ತಿನ ಯಾವುದೇ ಮೂಲೆಗೆ ಹೋಗಿ, ಯಾವುದೇ ಖಂಡಕ್ಕೆ ಸಾಗಿ, ಮಹಿಳೆಯರ ಸಂಕಷ್ಟಗಳು ಸಮಾನ.

ಈ ನೆಲದ ಹೆಂಗಸರು ಸದಾ ಕಾಲಕ್ಕೂ ನ್ಯಾಯಕ್ಕಾಗಿ ಹೋರಾಡಿದವರು. ಲಿಂಗಭೇದದ ವಿರುದ್ಧದ ಪ್ರತಿಭಟಿಸಿದವರು, ಸಮಾನ ಹಕ್ಕುಗಳ ಒತ್ತಾಯಿಸಿದವರು, ಸುಳ್ಳು ಕಾರಣಕ್ಕೆ ಜೈಲಿನಲ್ಲಿ ಕೊಳೆಯುತ್ತಿರುವ, ಕೊಲೆಯಾದ ಸಂಬಂಧಿಕರಿಗಾಗಿ ಕಂಬನಿ ಸುರಿಸಿದವರು, ಅತ್ಯಾಚಾರಕ್ಕೆ ಒಳಗಾದ ಹೆಣ್ಣು ಮಕ್ಕಳನ್ನು ಸಂತೈಸಿದವರು. ಸರಕಾರ ಮತ್ತು ಕ್ರಾಂತಿಕಾರಿ ಎಂದು ಹೇಳಿಕೊಳ್ಳುವ ಸಶಸ್ತ್ರ ಗುಂಪುಗಳು ಮಹಿಳಾ ಹಕ್ಕುಗಳನ್ನು ಉದಾಸೀನದಿಂದ ನೋಡುವುದಷ್ಟೇ ಅಲ್ಲ, ಹಿಂಸಾತ್ಮಕವಾಗಿ ಮಹಿಳಾ ದನಿಯನ್ನು ಅಡಗಿಸಿವೆ.

ಮಹಿಳಾ ಮುಖಂಡಳಾಗಿ ಮೇಲೇರಿ ನಿಂತ ಮರಿಯಾ ಎಲೆನಾ 1992ರಲ್ಲಿ ಕೊಲ್ಲಲ್ಪಟ್ಟಳು. ಈಕೆ ಮಹಿಳಾ ಹಕ್ಕುಗಳಿಗಾಗಿ ಹೋರಾಡಿದವಳು. ಆಕೆಗಾಗ 33 ವರ್ಷ. ಎರಡು ಗಂಡುಮಕ್ಕಳ ತಾಯಿ, 11 ವರ್ಷದ ಗುಸ್ತಾವೋ ಮತ್ತು 12 ವರ್ಷದ ಡೇವಿಡ್ ಇನ್ನೂ ಎಳೆಯ ಹುಡುಗರು. ಎಲೆನಾಳನ್ನು ಶೈನಿಂಗ್ ಪಾತ್‌ನ ಗೊರಿಲ್ಲಾಗಳು ಹತ್ಯೆ ಮಾಡಿದರು. ಆಕೆಯ ಮಕ್ಕಳ ಎದುರೇ ಗುಂಡಿಟ್ಟು ಕೊಂದರು. ಕೊಂದ ನಂತರ ಆಕೆಯ ದೇಹಕ್ಕೆ ಡೈನಮೈಟ್ ಇಟ್ಟು ಆಸ್ಫೋಟಿಸಿದರು. ಆಕೆಯ ಹತ್ಯೆ ಪೆರುವಿನ ಇತರ ಮಹಿಳಾ ಚಳುವಳಿಗಳಿಗೆ ಎಚ್ಚರಿಕೆಯಾಗಿತ್ತು. ಶೈನಿಂಗ್ ಪಾತ್ ವಿರುದ್ಧ

ಪೆರುವಿನ ಜನರನ್ನು ಎಚ್ಚರಿಸ ಹೊರಟ ಗುಂಪುಗಳಿಗೆ ಬೆದರಿಕೆಯಾಗಿತ್ತು.

ಮರಿಯಾ ಎಲೆನಾ ಲೀಮಾದ ಅತಿದೊಡ್ಡ ಕೊಳಚೆ ಪ್ರದೇಶ 'ವಿಲ್ಲಾ ಎಲ್ ಸಲ್ವಾದರ್'ನ ಎಡ ಪಕ್ಷದ ಚುನಾಯಿತ ಉಪಮೇಯರ್. ಎಲೆನಾಳ ಬದುಕು ಪೆರುವಿನ ಬಡ ಮಹಿಳೆಯರ ಹೋರಾಟವನ್ನು ಕುರಿತಾಗಿದೆ. ಮತ್ತಷ್ಟು ಬಡತನಕ್ಕೆ ದೂಡಿದ ಫ್ಯುಜಿಮೊರೆ ಕಾಲದಲ್ಲಿ ಬದುಕುಳಿಯಲು, ಹಸಿದ ಹೊಟ್ಟೆಗಳಿಗೆ ಊಟ ಒದಗಿಸಲು, ಮಹಿಳೆಯರು ಜೊತೆಗೂಡಿ 'ಹಾಲಿನ ಬಟ್ಟಲು' ಮತ್ತು 'ಸಮುದಾಯ ಅಡಿಗೆಮನೆ'ಯಂತಹ ಯೋಜನೆಗಳನ್ನು ಹಾಕಿಕೊಂಡರು. ಎಲೆನಾ ಈ ಯೋಜನೆಗಳಲ್ಲಿ ತೊಡಗಿದಳು, ಅವುಗಳ ಮುಂದಾಳಾದಳು. ಆಕೆ ಹಾಲಿನ ಬಟ್ಟಲು ಯೋಜನೆಯ ಪ್ರಮುಖ ಕಾರ್ಯಕರ್ತಳು, ಸಂಘಟನಕಾರ್ತಿ. ಪ್ರತಿ ಮಗುವಿಗೆ ದಿನಕ್ಕೆ ಒಂದು ಬಟ್ಟಲು ಹಾಲನ್ನಾದರೂ ದೊರೆಯಬೇಕೆಂದು ಹೊರಟ ಯೋಜನೆ. ಆದರೆ ಇಂತಹ ನಿಸ್ವಾರ್ಥ ಸೇವೆಯ ಕೆಲಸವೂ ಕ್ರಾಂತಿಕಾರಿಗಳಿಗೆ ಸಹಿಸದಾಗಿತ್ತು. ಈ ಬಡ ಜನರ ಹೊಟ್ಟೆಗೆ ಒಂದಿಷ್ಟು ಬಿದ್ದರೆ, ಅವರಲ್ಲಿ ಕ್ರಾಂತಿಯ ಕಿಡಿ ಹೊತ್ತುವುದಾದರೂ ಹೇಗೆ. ಕ್ರಾಂತಿಯ ಹಾದಿಗೆ ಎಳೆಯಲು ಈ ಬಡಜನರ ಹೊಟ್ಟೆಯಲ್ಲಿ ಸದಾ ಹಸಿವಿನ ಬೆಂಕಿ ಉರಿಯುತ್ತಿರುವಂತೆ ನೋಡಿಕೊಳ್ಳಬೇಕು. ಇದ್ದ ಸರಕಾರದ ರಾಜಕೀಯ ಚೌಕಟ್ಟಿನ ಒಳಗೇ ಎಲಿನಾ ಮಹಿಳೆಯರ ಸಬಲೀಕರಣಕ್ಕೆ ಹೊರಟಿದ್ದಳು. ಮಹಿಳೆಯರು ತಮ್ಮ ಈ ಯೋಜನೆಗಳಿಗೆ ಸರಕಾರದಿಂದ ಒಂದಿಷ್ಟು ಬೆಂಬಲ ಗಿಟ್ಟಿಸಿದರು. ಆದರೆ ಸಮುದಾಯ ಅಡುಗೆ ಮನೆಗಳು, ಹಾಲಿನ ಬಟ್ಟಲು ಯೋಜನೆಗಳು ಜನರ ಹೋರಾಟದ ಶಕ್ತಿಯನ್ನು ಕುಂದಿಸುತ್ತವೆ ಎಂದು 'ಶೈನಿಂಗ್ ಪಾತ್'ನ ನಂಬಿಕೆ. ಶೈನಿಂಗ್ ಪಾತ್, 'ಈ ಯೋಜನೆಗಳ ಹಿಂದೆ ಸರಕಾರ, ಮಿಲಿಟರಿ, ಕ್ಯಾಥೊಲಿಕ್ ಚರ್ಚ್ ಇದೆ' ಎಂದು ಗುಡುಗಿತು. ಸರಕಾರದ ವಿರುದ್ಧ ನಿಂತ ಶೈನಿಂಗ ಪಾತಗೆ, ಜನರು ಹೊಟ್ಟೆ ತುಂಬಾ ತಿಂದರೆ ತಮ್ಮ ಸಶಸ್ತ್ರ ಕ್ರಾಂತಿ ನಿಶಕ್ತವಾಗುತ್ತದೆಂಬ ಹೆದರಿಕೆ. 'ಈ ಯೋಜನೆಗೆ ಹಣ ಅಮೆರಿಕದಿಂದ ಬಂದಿದೆ' ಎಂಬ ಆಪಾದಿಸಿತು. ನಿಜವಿರಲೂ ಬಹುದು. ಒಂದು ಕಡೆ ಆಫ್ಘಾನಿಸ್ತಾನದ ಮೇಲೆ ಬಾಂಬಿನ ಮಳೆಗರೆಯುತ್ತಾ, 'ನಾವೆಷ್ಟು ಒಳ್ಳೆಯವರು ನೋಡಿ' ಎಂದು ಆಹಾರದ ಪೊಟ್ಟಣಗಳನ್ನು ಎಸೆದಂತೆ, ಒಂದೆಡೆ ಫ್ಯುಜಿಮೊರೆಯಂತಹ ಸರ್ವಾಧಿಕಾರಿಗೆ ತನ್ನ ರಾಜಕೀಯ ವಿರೋಧಿಗಳನ್ನು ಹತ್ತಿಕ್ಕಲು, ಅಮೆರಿಕಕ್ಕೆ ಬಾಗಿಲು ತೆರೆಯಲು ಸಹಾಯಕವಾಗಿ ಮಿಲಿಟರಿ ತಾಕತ್ತು ನೀಡುತ್ತಲೇ, ಜನರನ್ನು ಒಲಿಸಿಕೊಳ್ಳಲು ಇಂತಹ ಆಹಾರ ಸರಬರಾಜಿನ ಯೋಜನೆಗಳಿಗೆ ಒಂದಿಷ್ಟು ಸಹಾಯ ನೀಡಿದ್ದರೆ ಅಚ್ಚರಿಯಲ್ಲ. ಆದರೆ ಎಲಿನಾ ಅಮೆರಿಕದ ಪರವೂ ಇರಲಿಲ್ಲ, ಸರಕಾರದ ಪರವೂ ಇರಲಿಲ್ಲ, ಶೈನಿಂಗ್ ಪಾತ್‌ನ ಆತಂಕದವಾದದ ಪರವಂತೂ ಇರಲೇ ಇಲ್ಲ. ತನ್ನ ಕೊಳಚೆ ಪ್ರದೇಶದ ಜನರಿಗೆ ಹೇಗಾದರೂ ಆಹಾರ ಒದಗಿಸುವ, ಶಾಲೆಗೆ ಹೋಗುವ ಮಕ್ಕಳಿಗೆ ಒಂದು ಲೋಟವಾದರೂ ಹಾಲು ನೀಡುವ ಮೂಲಭೂತ ಹೋರಾಟ ಆಕೆಯದಾಗಿತ್ತು.

ಎಲೆನಾ ಸಾರ್ವಜನಿಕವಾಗಿ ಶೈನಿಂಗ್ ಪಾತ್‌ನ ಆತಂಕವಾದವನ್ನು ಖಂಡಿಸಿದಳು. 'ಅವರು ಬಡವರ ಪರ ಇಲ್ಲ' ಎಂದು ಸಾರಿದಳು. ಜೊತೆಗೇ ಸರಕಾರ, ಪೋಲಿಸು, ಮಿಲಿಟರಿ, ಮಾನವ ಹಕ್ಕುಗಳನ್ನು ಹತ್ತಿಕ್ಕುತ್ತಿರುವ ಬಗ್ಗೆಯೂ ಗಟ್ಟಿ ಕಂಠದಿಂದ ವಿರೋಧಿಸಿ ಮಾತನಾಡಿದಳು.

ಎಲೆನಾಳ ಹಿನ್ನೆಲೆ ನನ್ನ ಕುತೂಹಲ ಕೆದಕಿತ್ತು. ಎಲೆನಾ ಅತ್ಯಂತ ದಾರಿದ್ರ್ಯದ ಬಾಲ್ಯದಿಂದ ಮೇಲೆದ್ದು ಬಂದ ಕಪ್ಪು ಮಹಿಳೆ. ಅತಿ ಕಷ್ಟದಿಂದ ವಿದ್ಯಾಭ್ಯಾಸ ಗಳಿಸಿದವಳು. ಗೆಳೆಯ ಗುಸ್ತಾವೋನೊಡನೆಯ ಸ್ನೇಹ ಪ್ರೀತಿಗೆ ತಿರುಗಿದಾಗ, ಗರ್ಭಿಣಿಯಾಗಿದ್ದಳು. ಗುಸ್ತಾವೋ ಆರ್ಥಿಕ ತೊಂದರೆಗಳಲ್ಲಿ ಸಿಲುಕಿದ್ದ. ಅನಾಥರಾದ ಏಳು ಮಂದಿ ಸೋದರ ಸೋದರಿಯರಲ್ಲಿ ಹಿರಿಯವ. ಆತನ ತಂದೆ ಜೈಲಿನಲ್ಲಿದ್ದ. ಇಂತಹ ಸ್ಥಿತಿಯಲ್ಲಿ ವಿವಾಹ ಆತನಿಗೆ ಮತ್ತಷ್ಟು ತೊಡಕು ಮಾಡುವುದೆಂದು ಎಲಿನಾ ಅವನನ್ನು ಒತ್ತಾಯಿಸಲಿಲ್ಲ. ಆದರೆ ಎಲೆನಾಳ ತಾಯಿ ತನ್ನ ಮಗಳನ್ನು ಮದುವೆಯಾಗುವಂತೆ ಗುಸ್ತಾವೋನನ್ನು ಕೇಳಿಕೊಂಡಳು. ವಿವಾಹ ನೆರವೇರಿತು. ಪತಿಯೊಡನೆ ಎಲೆನಾಳ ಸಂಬಂಧ ಉತ್ತಮವಿತ್ತು. ಕೆಲವೊಮ್ಮೆ ಮಾತ್ರ ಮನೆಗೆಲಸದಲ್ಲಿ - ಆತನಿಂದ ಸಹಾಯ ಕೋರಿದಾಗ - ಪಿತೃಪ್ರಧಾನತೆಯ ತುಣುಕುಗಳು ಇಣುಕುತ್ತಿದ್ದವು. ವೈಯಕ್ತಿಕ ಬದುಕಲ್ಲಿ, ಸಾರ್ವಜನಿಕ ರಂಗದಲ್ಲಿ ಉದ್ದಕ್ಕೂ ಎದುರಿಸಿದ ಲಿಂಗ ತಾರತಮ್ಯಗಳ ನಡುವೆ, ಮೆಲ್ಲನೆ ಮೇಲೆದ್ದು ಜನರ ನಾಯಕಿಯಾಗಿ ಎಲೆನಾ ರೂಪುಗೊಂಡಿದ್ದಳು. ಜನಪ್ರಿಯ ಮಹಿಳಾ ಚಳುವಳಿಯ ಮುಖಂಡಳಾದಳು.

1984ರಲ್ಲಿ ತನ್ನ 24ನೇ ವಯಸ್ಸಿನಲ್ಲಿ ಎಲೆನಾ 'ಎಲ್ ಸಲ್ವಾದರ್'ನ ಜನಪ್ರಿಯ ಮಹಿಳಾ ಫೆಡರೇಷನ್‌ಗೆ ಅಧ್ಯಕ್ಷಳಾಗಿ ಚುನಾಯಿಸಲ್ಪಟ್ಟಳು. ಇದು ದೇಶದಲ್ಲಿಯೇ ಅತ್ಯಂತ ಚಟುವಟಿಕೆಯ ಮಹಿಳಾ ಸಂಘಟನೆಯಾಗಿತ್ತು. ಪ್ರಜಾತಂತ್ರದ ಪರವಿದ್ದ ಆಕೆಯ ಚಿಂತನೆ, ಸುತ್ತಲಿನ ಮತ್ತಷ್ಟು ಸಂಘಟನೆಗಳನ್ನು ಆಕರ್ಷಿಸಿದವು.

ಎಲೆನಾ ಜೀವನೋತ್ಸಾಹದಿಂದ ಪುಟಿಯುತ್ತಿದ್ದ ಮಹಿಳೆ. ಮಹಿಳಾ ಸಂಘದ ಕೆಲಸದಲ್ಲಿ ಎಲ್ಲಿಲ್ಲದ ಉತ್ಸಾಹದಿಂದ

ತೊಡಗಿದ ಮಹಿಳೆ. ಯಾವುದೇ ವೈಯಕ್ತಿಕ ಮಹತ್ವಾಕಾಂಕ್ಷೆ ಇಲ್ಲದ ಸೇವಾ ಸಂಘಟನಾ ಮನೋಭಾವದ ಮಹಿಳೆ. ಆಕೆ ತನ್ನ ಎಲ್ ಸಲ್ವಾಡರ್‌ನ ಬದುಕನ್ನು ಬಿಟ್ಟು ಹೊರಬರಲಿಲ್ಲ. ಸ್ವಚ್ಛವಾಗಿ ಇಟ್ಟುಕೊಂಡ ಪುಟ್ಟಮನೆ. ಮುಖದ ತುಂಬಾ ದೊಡ್ಡ ಮುಗುಳ್ನಗು, ಕೆನ್ನೆಗಳಲ್ಲಿ ಬಿದ್ದ ಗುಳಿ, ಅರಳಿನಿಂತ ಕಣ್ಣುಗಳು ಅವಳನ್ನು ಸದಾ ಎಳೆಯ ಹುಡುಗಿಯಂತೆ ಕಾಣಿಸುತ್ತಿದ್ದವು. ಎಲಿನಾ ಎಲ್ ಸಲ್ವಾದರ್‌ನಲ್ಲಿ ಒಂದು 'ಮಹಿಳಾ ಗೃಹ'ವೊಂದನ್ನು ನಿರ್ಮಿಸಿದ್ದಳು. ಇಲ್ಲಿ ಓರ್ವ ಸ್ತ್ರೀರೋಗ ತಜ್ಞರು ಮಹಿಳಾ ಆರೋಗ್ಯದ ಬಗ್ಗೆ ಕುಟುಂಬ ಯೋಜನೆಯ ಬಗ್ಗೆ ಮಾತನಾಡುತ್ತಿದ್ದರು. ಎಲೆನಾಳ ಉತ್ಸಾಹ ಸಾಂಕ್ರಾಮಿಕವಾಗಿತ್ತು. ಸುತ್ತಲ ಮಹಿಳೆಯರಿಗೆ ಸ್ಫೂರ್ತಿಯ ಸೆಲೆಯಾಗಿತ್ತು.

ಎಲೆನಾ 'ವಿಲ್ಲಾ ಎಲ್ ಸಲ್ವಾದರ್'ನ ಮೂರು ಲಕ್ಷ ಜನರ ಮುಖವಾಣಿಯಾಗಿ, ಉಪಮೇಯರ್ ಆಗಿ ನಿಂತಳು. ಎಲೆನಾ 'ಎಮ್.ಎ.ಎಸ್.'ನ (ಮೂವ್‌ಮೆಂಟ್ ಫಾರ್ ಸೋಶಿಯಲಿಸ್ಟ್ ಅಫರ್ಮೇಷನ್) ಸದಸ್ಯಳಾಗಿದ್ದುದು 'ಶೈನಿಂಗ್ ಪಾತ್'ಗೆ ಅಸಹನೆಯ ವಿಷಯವಾಗಿತ್ತು. ಎಮ್.ಎ.ಎಸ್. ಎಡ ಪಂಥೀಯ ಗುಂಪಿಗೆ ಸೇರಿದ ತಂಡ. 1990ರಲ್ಲಿ ಈಕೆ ಉಪಮೇಯರ ಆಗಿ ಆರಿಸಿ ಬಂದಳು. 'ಶೈನಿಂಗ್ ಪಾತ್'ಗೆ ಇಂತಹ ಮಹಿಳಾ ಸಂಘಟನೆಗಳ ಬಗ್ಗೆ ಸದಾ ಗುಮಾನಿ. ಈ ಮಹಿಳೆಯರು. ಜನರ ನಡುವೆ ಬೇರೂರಿದವರು, ಅತ್ಯಂತ ಕಷ್ಟದ ಆರ್ಥಿಕ ಸ್ಥಿತಿಯಲ್ಲೂ ಬದುಕುಳಿವ ಮಾರ್ಗಗಳನ್ನು ಕಂಡುಕೊಂಡವರು. ಇವೆಲ್ಲ ಶೈನಿಂಗ್ ಪಾತ್‌ನ ಗುರಿ ಮತ್ತು ಉದ್ದೇಶಕ್ಕೆ ವಿರುದ್ಧವಿತ್ತು. ಹಾಗೆಂದೇ ಈ ಜನಪ್ರಿಯ ಜನಪರ ಮುಖಂಡರನ್ನು ವ್ಯವಸ್ಥಿತವಾಗಿ ಕೊಲ್ಲುವುದು ಅವರ ಉದ್ದೇಶವಾಗಿತ್ತು. ಅಷ್ಟೇ ಅಲ್ಲ ಇಂತಹ ಮಹಿಳಾ ಚಳುವಳಿಗಳು ಕುಟುಂಬ ಯೋಜನೆಯ ಬಗ್ಗೆ ಪ್ರಚಾರ ಮಾಡುವುದು 'ಶೈನಿಂಗ್ ಪಾತ್'ಗೆ ಸರಿಕಾಣುತ್ತಿರಲಿಲ್ಲ. ಇದರಿಂದ ಮಹಿಳೆಯರು ಕ್ರಾಂತಿಕಾರಿ ತಂಡಕ್ಕೆ ಹೆತ್ತು ಕೊಡುವುದು ಕಡಮೆ ಆಗುತ್ತದೆ ಎಂಬ ಆತಂಕ ಅವರದು.

ಬಡತನದ 'ಶಾಂಟಿ ಟೌನ್'ನಲ್ಲಿರುವ ಜನರ ಆತಂಕವಾದದತ್ತ ವಾಲುತ್ತಿದ್ದ ಅಪಾಯದ ಸೂಚನೆಗಳನ್ನು ಕಂಡ ಎಲಿನಾ 'ನೆರೆಹೊರೆ ಪಹರೆ'ಗಳನ್ನು ಯೋಚಿಸಿದ್ದಳು. ಒಬ್ಬರು ಇನ್ನೊಬ್ಬರ ಪರಿಚಯ ಮಾಡಿಕೊಂಡು, ಜನರು ಒಗ್ಗೂಡಿದರೆ ಆತಂಕವಾದವನ್ನು ಹಿಮ್ಮೆಟ್ಟಬಹುದೆಂದು ನಂಬಿದ್ದಳು. ಇವೆಲ್ಲವೂ ಶೈನಿಂಗ್ ಪಾತ್‌ಗೆ ತಮ್ಮ ವಿರುದ್ಧದ ಕೆಲಸವಾಗಿ ಕಣ್ಣು ಕೆಂಪಾಗಿಸಿತ್ತು. ಯಾದವೀ ಕಲಹದಲ್ಲಿ ಸೊರಗಿ ಹೋದ ಪೆರುವಿನಲ್ಲಿ, ಎಲಿನಾ 'ಮದರ್ ಕರೇಜ್' ಎಂದೇ ಪ್ರಸಿದ್ಧಳಾದಳು. 'ಸಂಘಟಿತರಾದ ಮಹಿಳೆಯರು ತಳದಿಂದ ಪ್ರಜಾತಂತ್ರವನ್ನು ಕಟ್ಟುವುದು ಹೇಗೆ ಎಂದು ತೋರಿಸುತ್ತಿದ್ದಾರೆ. ಬದುಕುಳಿಯಬಲ್ಲೆವು ಎಂದು ತೋರುವುದಲ್ಲದೆ, ತಮ್ಮದೇ ಮುಂದಾಳತ್ವದಿಂದ ಉದ್ಯೋಗ ಕಲ್ಪಿಸುತ್ತಿದ್ದಾರೆ, ದೇಶವನ್ನು ಕಟ್ಟುವ ಕೆಲಸದಲ್ಲಿ ತೊಡಗುತ್ತಿದ್ದಾರೆ. ಇದರ ಮೂಲಕ ಸಾಮಾಜಿಕ ಪರಿವರ್ತನೆಗೆ ಕಾರಣಕರ್ತರಾಗುತ್ತಿದ್ದಾರೆ. ಮಹಿಳೆಯರು ಒಗ್ಗಟಿಗಾಗಿ ಹೋರಾಡುತ್ತಿದ್ದಾರೆ, ಅವರಿಗೆ ಗೊತ್ತು ಒಗ್ಗಟ್ಟಿನಲ್ಲಿ, ನಾವು ಜೊತೆಗೂಡಿದರೆ ಮಾತ್ರ ನಮ್ಮ ಮಕ್ಕಳ ಕಲ್ಯಾಣ ಸಾಧ್ಯ' ಎಂದು ಎಲೆನಾ ಸಾರಿದ್ದಳು.

ಎಲೆನಾ ಶೈನಿಂಗ್ ಪಾತ್ ಅವರನ್ನು ಎದುರಿಸಿ ಮಾತಾನಾಡುತ್ತಿದ್ದಳು. 'ನಿಮ್ಮಂತೆಯೇ ನ್ಯಾಯಕ್ಕಾಗಿ, ಅಭಿವೃದ್ಧಿಗಾಗಿ ಜೀವವನ್ನು ಮುಡಿಪಿಟ್ಟು ಹೋರಾಡುವವರಿದ್ದಾರೆ, ಆಧರೆ ಅವರು ಕೊಲ್ಲದೆ, ಆತಂಕವಾದಕ್ಕೆ ಇಳಿಯದೆ ಹೋರಾಡುತ್ತಾರೆ ನಿಮ್ಮ ಹಿಂಸೆಯ ಹಾದಿ ಸರಿಯಲ್ಲ' ಎಂದು ಎಲೆನಾ ಕೂಗಿ ಹೇಳುತ್ತಿದ್ದಳು.

1991ರಲ್ಲಿ ಹಾಲಿನ ಲೋಟದ ನಿರ್ವಾಹಕರಲ್ಲಿ ಒಬ್ಬಳಾದ ಜೌನಾ ಲೊಮಾಜಳನ್ನು ಶೈನಿಂಗ್ ಪಾತ್ ಕೊಂದಿತು. ಆಕೆ ತನ್ನ ಬಡಾವಣೆಯಲ್ಲಿ ಶೈನಿಂಗ್ ಪಾತನ ಆತಂಕವಾದದ ವಿರುದ್ಧ ಮಾತನಾಡಿದ್ದಳು. ಆಕೆಯ ಶವದ ಪಕ್ಕದಲ್ಲಿ ಒಂದು ಸತ್ತ ನಾಯಿಯನ್ನು, ದೊಡ್ಡ ಪೋಸ್ಟರ್‌ಅನ್ನು ಬಿಟ್ಟು ಎಚ್ಚರಿಸಿದ್ದರು. ಶೈನಿಂಗ್ ಪಾತ್‌ನ ಕ್ರೂರ ಕೊಲೆಯ ಬಗ್ಗೆ ಜನ ಬೀದಿಗಿಳಿದು ಪ್ರತಿಭಟಿಸಿದರು. ಶವಯಾತ್ರೆಯಲ್ಲಿ ಎಲೆನಾ ಶೈನಿಂಗ್ ಪಾತನ್ನು ತೀವ್ರವಾಗಿ ಖಂಡಿಸಿದಳು. ಇಡೀ ದೇಶದ ಅಸ್ತಿತ್ವವನ್ನೇ ಮುಗಿಸುವ ಆತಂಕಕೋರರೆಂದು ಕೂಗಿದಳು. ಉತ್ತರವಾಗಿ ಶೈನಿಂಗ್ ಪಾತ್ ಆಹಾರ ಸಂಗ್ರಾಹಕಗಳ ಮೇಲೆ ಬಾಂಬ್ ಎಸೆಯಿತು. ಎಲೆನಾಗೆ ಬೆದರಿಕೆ ಹಾಕಿತು. 1991ರ ನವೆಂಬರ್ ತಿಂಗಳು, ಎಲೆನಾಳ ಹಿತೈಷಿಗಳು ಎಲೆನಾಳ ಜೀವ ಅಪಾಯದಲ್ಲಿರುವುದನ್ನು ಕಂಡು 'ದೇಶ ಬಿಟ್ಟು ಹೋಗುವಂತೆ' ಒತ್ತಾಯಿಸಿದರು. ಆದರೆ ದೇಶದ ಹೊರಗೆ ಹೋದ ಎಲೆನಾ, ಹತ್ತೇ ದಿನದಲ್ಲಿ ಹಿಂತಿರುಗಿದಳು. 'ಪರದೇಶದಲ್ಲಿ ನಿಶಕ್ತಳಾಗಿ ನಿಸ್ಸಹಾಯಕಳಾಗಿ ಬದುಕುವುದಕ್ಕಿಂತ, ತನ್ನ ದೇಶದಲ್ಲಿ ಶೈನಿಂಗ್ ಪಾತ್ ವಿರುದ್ಧ ಹೋರಾಡುತ್ತಾ ಸಾಯುವುದು ಮೇಲು' ಎಂದು ನಿರ್ಧರಿಸಿದಳು. ಡಿಸೆಂಬರ್ ತಿಂಗಳಲ್ಲಿ ಎಲೆನಾಳ ಜೊತೆಗೆ ಕೆಲಸ ಮಾಡುತ್ತಿದ್ದ ಮತ್ತೊಬ್ಬ ಮಹಿಳೆ ಎಮ್ಮಾ ಹಿಲಾರಿಯೋಳನ್ನು ಅವಳ ಮನೆಯಲ್ಲೇ ಗುಂಡಿಟ್ಟು ಕೊಂದರು. ಪವಾಡವೆಂಬಂತೆ ಗುಂಡಿನೇಟಿನ ನಂತರವೂ ಎಮ್ಮಾ ಬದುಕುಳಿದಳು. ಜೀವ ಉಳಿಸಿಕೊಳ್ಳಲು ಎಮ್ಮಾಗೆ ದೇಶ ಬಿಡುವುದೊಂದೇ ಮಾರ್ಗವಾಯಿತು. ಇದಾದ ನಂತರ

ಇಲ್ಲಿಯ ಮಹಿಳಾ ಚಳುವಳಿಗಾರರು ಎಲೆನಾಳ ಜೀವವನ್ನು ಕಾಪಿಡುವತ್ತ ತಮ್ಮ ಗಮನವನ್ನು ಪಡೆದದ್ದೂ ಆಯಿತು. ಸಾವಿನ ಕತ್ತಿ ಕುತ್ತಿಗೆಯ ಮೇಲೆ ನೇತಾಡುತ್ತಿದ್ದರೂ, ಎಲೆನಾ ಧೈರ್ಯವಾಗಿ ಶೈನಿಂಗ್ ಪಾತನ ಆತಂಕವಾದವನ್ನು ಖಂಡಿಸುತ್ತಾ ಹೋದಳು. ಎಲೆನಾಳ ದಿಟ್ಟತನ ಆಕೆಯನ್ನು ನ್ಯಾಷನಲ್ ಪ್ರೆಸ್ 'ವರ್ಷದ ವ್ಯಕ್ತಿ'ಯಾಗಿ ಆಯ್ಕೆಮಾಡುವಂತೆ ಮಾಡಿತು.

ಆದರೆ 1992ರ ಫೆಬ್ರವರಿ 15 ಎಲೆನಾಳನ್ನು ಕ್ರೂರವಾಗಿ ಹತ್ಯೆ ಮಾಡಿದರು. ಹಿಂದಿನ ದಿನವಷ್ಟೇ ಶೈನಿಂಗ್ ಪಾತ್ ಲೀಮಾದಲ್ಲಿ ಸಶಸ್ತ್ರ ಮುಷ್ಕರಕ್ಕೆ ಕರೆ ಕೊಟ್ಟಿತ್ತು. ಎಲೆನಾ ಇದನ್ನು ಪ್ರತಿಭಟಿಸಿ ಶಾಂತಿ ಮೋರ್ಚಾಗೆ ಕರೆಕೊಟ್ಟಳು. ಆ ಹಿಂದಿನ ರಾತ್ರಿ ಎಲೆನಾ ಮನೆಯಲ್ಲಿ ಮಲಗಿರಲಿಲ್ಲ. ಆದರೆ ಬೆಳಗ್ಗೆ ಚಂದಾ ಎತ್ತುವ ಚಟುವಟಿಕೆಯಲ್ಲಿ ಭಾಗಿಯಾಗಲು ಹಿಂತಿರುತಿದ್ದಳು. ಕಮಿಟಿ ರೂಮಿನಲ್ಲಿ ಕುಳಿತಂತೆ ಸಶಸ್ತ್ರ ಶೈನಿಂಗ್ ಪಾತ ತಂಡ ಒಳ ನುಗ್ಗಿತು. ಅಲ್ಲಿದ್ದವರನ್ನು ಹೊರಗೆ ಕಳುಹಿಸಿ, ಎಲೆನಾಳನ್ನು ತಡೆ ಹಿಡಿಯಿತು. ಆಕೆಯ ಮಕ್ಕಳು, ಉಳಿದ ಹೆಂಗಸರು ನೋಡುತ್ತಿದ್ದರಂತೆಯೇ, ಮೆಷೀನ್ ಗನ್‌ನಿಂದ ಗುಂಡಿಟ್ಟು ಕೊಂದರು. ಎಲೆನಾಳ ಎಡಪಂಥದವರೊಡನೆಯ ಒಡನಾಟ, ವಿಲ್ಲಾದ ಉಪಮೇಯರ್ ಆಗಿ ಗಳಿಸಿದ ಜನಪ್ರಿಯತೆ, ದೃಢವಾಗಿ ತಳೆದ ಸ್ತ್ರೀವಾದಿ ನಿಲುವುಗಳು ಶೈನಿಂಗ್ ಪಾತ್ ಅವರಿಗೆ ಆಕೆ ನೇರ 'ಟಾರ್ಗೆಟ್' ಆಗುವಂತೆ ಮಾಡಿತ್ತು.

ಶೈನಿಂಗ್ ಮತ್ತು ತನ್ನ ಹಿಂಸಾತ್ಮಕ ಆಕ್ರಮಣಗಳನ್ನು ನಿಲ್ಲಿಸುವಂತೆ ಕರೆ ನೀಡಿ, ಎಲೆನಾ ಅನೇಕ ಸಂದರ್ಶನಗಳನ್ನು ನೀಡಿದ್ದಳು. ಲೀಮಾದ ದಿನ ಪತ್ರಿಕೆ 'ಲಾ ರಿಪಬ್ಲಿಕಾ'ಗೆ ಸಂದರ್ಶನಗಳನ್ನು ನೀಡಿದ್ದಳು. ಲೀಮಾದ ದಿನ ಪತ್ರಿಕೆ 'ಲಾ ರಿಪಬ್ಲಿಕಾಗೆ ಸಂದರ್ಶನ ನೀಡುವಾಗ ಒಮ್ಮೆ ಎಲೆನಾ ಹೇಳಿದ್ದಳು 'ಶೈನಿಂಗ್ ಪಾತ್ ಗೊರಿಲ್ಲಾಗಳ ವಿಧಾನಗಳು ಸರಿ ಕಂಡು ಬರದಿದ್ದರೂ, ನಾನು ಅನೇಕ ವರ್ಷಗಳ ಕಾಲ ಅವರನ್ನು ಸಾರ್ವಜನಿಕವಾಗಿ ಟೀಕಿಸಲಿಲ್ಲ. ಕಾರಣ ಅವರು ಸಮಾಜದ ಸ್ಥಿತಿ ಸುಧಾರಿಸುತ್ತ ನಿಷ್ಠರಾಗಿ ಹೋರಾಡುತ್ತಿದ್ದಾರೆ ಎಂದುಕೊಂಡಿದ್ದೆ. ಆದರೆ ಇವರು ನನ್ನ ಸಹೋದ್ಯೋಗಿಗಳನ್ನೇ ಕೊಲ್ಲಲು ಆರಂಭಿಸಿದಾಗ, ಅವರ ಸಮಾಜ ಘಾತಕ ಕೆಲಸದ ಬಗ್ಗೆ ಸುಮ್ಮನಿರುವುದು ಸಾಧ್ಯವಿರಲಿಲ್ಲ'. 'ಸುಮ್ಮನಿರದ' ಈ ಹೋರಾಟಗಾರ್ತಿಯನ್ನು ಗುಂಡಿಟ್ಟು ಸುಮ್ಮನಾಗಿಸಿದರು.

ವಿಷಾದವೆಂದರೆ, ಸರಕಾರವನ್ನೂ ಪ್ರಶ್ನಿಸುತ್ತಿದ್ದ, ಸತ್ಯವನ್ನು ಹೇಳಲು ಹಿಂಜರಿಯದ ಎಲೆನಾ ಬಗ್ಗೆ ಮಾಧ್ಯಮಗಳೂ ಬರೆಯುತ್ತಿರಲಿಲ್ಲ. ಆಕೆಯ ಹತ್ಯೆಗೆ ಕೆಲವು ದಿನಗಳ ಮೊದಲು ಆಕೆ ಒಂದು ಕವನ ಬರೆದಿದ್ದಳು. ಅದರ ಒಂದು ಸಾಲು ಹೀಗೆ 'ನಾನಾಗಲೆ ನನ್ನ ಬದುಕಿನ ಅತಿ ಸುಂದರ ದಿನಗಳನ್ನು ಬದುಕಿದ್ದೇನೆ'. ಆಕೆಯ ಬೂದಿಯನ್ನು 'ಎಲ್ ಸಲ್ವಾದರ್'ನ ಮಹಿಳಾ ಫೆಡರೇಷನ್ ಎದುರು ಹರಡಿದರು. ಆಕೆಯ ಅಂತ್ಯ ಸಂಸ್ಕಾರಕ್ಕೆ ಸಾವಿರಾರು ಜನ ಭಾಗವಹಿಸಿದರು. ಜನಪ್ರಿಯ ಮಹಿಳಾ ಚಳುವಳಿಗೆ ಆಕೆಯ ಸಾವು ಅತಿ ದೊಡ್ಡ ಪೆಟ್ಟಾಗಿತ್ತು. ಎಲೆನಾಳ ಕೊನೆಯೊಡನೆ ಸಂಘಟನೆ ಮುಕ್ತಾಯವಾಗಲಿಲ್ಲ, ಮುಂದುವರೆಯಿತು. ಆದರೆ ಶೈನಿಂಗ್ ಪಾತ್‌ನ ಹಿಂಸಾತ್ಮಕ ಕೊಲೆಗಳೂ ನಿಂತಿಲ್ಲ. 1996ರಲ್ಲಿ ನೆರೆಹೊರೆಯ ಕ್ಯಾಂಟೀನ್ ಯೋಜನೆಗೆ ದುಡಿಯುತ್ತಿದ್ದ ಪ್ಯಾಸ್ಚುಲಾ ರೊಸಾದೋಳನ್ನೂ ಕೊಂದು ಹಾಕಿದರು. ಸಾಕಷ್ಟು ಬಾರಿ ಸಾವಿನ ಬೆದರಿಕೆ ಇದ್ದ ಈಕೆ 1993ರಲ್ಲಿ ಚಿಲಿಗೆ ಹೋದದ್ದುಂಟು. ಎರಡು ವರ್ಷದ ನಂತರ ಹಿಂತಿರುಗಿ ಬಂದಳು. ಕೆಲವೇ ತಿಂಗಳಲ್ಲಿ ಅವಳನ್ನು ಕೊಂದು ಹಾಕಿದರು.

ಡಯಾನಾ ಟುಪಾಕ್ ಸಂಪಾದಿಸಿದ ಮರಿಯಾ ಎಲೆನಾಳ ಆತ್ಮಚರಿತ್ರೆ ಇಂಗ್ಲಿಷ್‌ನಲ್ಲಿ ಪ್ರಕಟವಾಗಿದೆ ಎಂದು ತಿಳಿದು ಬಂದಿತು. ಆ ಪುಸ್ತಕಕ್ಕಾಗಿ ಬಹಳಷ್ಟು ಹುಡುಕಾಡಿದೆ. ಪುಸ್ತಕದಂಗಡಿಗಳೇ ಪೆರುವಿನಲ್ಲಿ ಅಪರೂಪ ಎನಿಸಿತು. ದೊಡ್ಡ ಊರುಗಳಲ್ಲಿ ಅನೇಕ ಪುಸ್ತಕದ ಅಂಗಡಿಗಳು ಕಂಡರೂ, ಪುಸ್ತಕಗಳೆಲ್ಲ ಸ್ಪಾನಿಷ್ ಭಾಷೆಯವು, ಇಂಗ್ಲಿಷಿನ ಪುಸ್ತಕಗಳೆಂದರೆ ಕೇವಲ ಪ್ರವಾಸಿ ಗೈಡುಗಳು.

ಎಲಿನಾ, ರೋಸಾಡೋ ಮುಂತಾದ ಮಹಿಳಾ ಮುಖಂಡರ ಘೋರ ಕೊಲೆಯೊಡನೆ ಮಹಿಳಾ ಹೋರಾಟ ಒಂದಿಷ್ಟು ಮೊಟಕಾಗಿರುವುದು ನಿಜ. ಪ್ರಾಣ ಭಯದಲ್ಲಿ ಅನೇಕ ಮಹಿಳಾ ಮುಖಂಡರು ದೇಶ ಬಿಟ್ಟರೆ, ಉಳಿದವರು ಕೆಲಸ ಬಿಟ್ಟರು. ಇತ್ತೀಚಿನ ವರ್ಷಗಳಲ್ಲಿ ಪೆರುವಿನ ಯಾದವೀ ಕಲಹ ಒಂದಿಷ್ಟು ತಣ್ಣಗಾಗಿದ್ದರೂ, ಮಹಿಳೆಯರಿನ್ನೂ ಹಿಂಸಾತ್ಮಕ ಕ್ರಾಂತಿಕಾರಿಗಳ ಮತ್ತು ಆತಂಕವಾದಿಗಳ ಟಾರ್ಗೆಟ್ ಆಗಿದ್ದಾರೆ. ಫ್ಯುಜಿಮೊರೆ ಕಾಲದಲ್ಲಿ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿದ ಪೋಲೀಸರು, ಸೈನಿಕರು, ಮಹಿಳಾ ಹೋರಾಟಗಾರ್ತಿಯರನ್ನು ಕೊಂದು ಮುಗಿಸಿದ ಕ್ರಾಂತಿಕಾರಿ ತಂಡದವರು, ಯಾವುದೇ ಶಿಕ್ಷೆ ಇಲ್ಲದೆ ನುಸುಳಿ ಹೋಗಿರುವ ಸಂದರ್ಭಗಳೇ ಹೆಚ್ಚು. ಎಲೆನಾಳ ಬದುಕು ಮತ್ತು ಸಾವು, ಬರೀ ಪೆರುವಿನ ಮಹಿಳೆಯರ ಅನುಭವವಾಗಿ ಮುಗಿಯುವುದಿಲ್ಲ, ಮೂರನೆ ಜಗತ್ತಿನ ಮಹಿಳೆಯರೆಲ್ಲರ ಹೋರಾಟವನ್ನು ಪ್ರತಿಬಿಂಬಿಸುತ್ತದೆ. ಜೊತೆಗೆ ಲ್ಯಾಟಿನ್ ಅಮೆರಿಕದ ಮಹಿಳಾ ಹೋರಾಟದ ಸದ್ಯದ ಚರಿತ್ರೆಯನ್ನು ತಿಳಿಸುತ್ತದೆ.

★

ಜ್ಞಾನ ದಾಹಕ್ಕೆ
ಕರ್ನಾಟಕದಲ್ಲಿ ಅಕ್ಷರ ದಾಸೋಹ

ಕಲಿಯುವ ಮುಗ್ದ ಮಕ್ಕಳ ಉತ್ಸಾಹಕ್ಕೆ ಹಸಿವಿನ ಭೂತ ಕಾಡಿದಲ್ಲಿ ಏನಾಗಬಹುದು?

ಅಪೌಷ್ಟಿಕತೆಯೊಂದಿಗೆ ಅಜ್ಞಾನ ಸೇರಿ ಅಭಿವೃದ್ಧಿಯೆಂಬುದು ಮರೀಚಿಕೆಯಾಗಬಹುದು. ಆದರೆ ಕರ್ನಾಟಕದಲ್ಲಿ ಮಾತ್ರ ಇದಕ್ಕೆ ಅವಕಾಶವಾಗದು. ಏಕೆಂದರೆ ಇಲ್ಲಿ ಸರ್ಕಾರ ತನ್ನ ಎಲ್ಲಾ ಶಾಲಾ ಮಕ್ಕಳಿಗೆ ಪ್ರತಿದಿನ ಪೌಷ್ಠಿಕತೆಯಿಂದ ಕೂಡಿದ ಬಿಸಿ ಬಿಸಿಯಾದ ಮಧ್ಯಾಹ್ನದ ಊಟ ಒದಗಿಸುವ ಅಕ್ಷರ ದಾಸೋಹ ನಡೆಸುತ್ತಿದೆ.

ಈ ಅಪೂರ್ವ ಕಾರ್ಯಕ್ರಮ ಕ್ರೀಯಾಶೀಲ ಮತ್ತು ದೂರದೃಷ್ಟಿ ಮುಖ್ಯಮಂತ್ರಿಗಳಾದ ಶ್ರೀ ಎಸ್. ಎಂ. ಕೃಷ್ಣ ಸರ್ಕಾರ ಪ್ರಾಯೋಗಿಕವಾಗಿ ರಾಜ್ಯದ ಈಶಾನ್ಯ ವಲಯದ ಏಳು ಜಿಲ್ಲೆಗಳಲ್ಲಿ (ರಾಯಚೂರು, ಕೊಪ್ಪಳ, ಗುಲ್ಬರ್ಗಾ, ಬೀದರ, ಬಳ್ಳಾರಿ, ಬಾಗಲಕೋಟೆ ಹಾಗೂ ಬಿಜಾಪುರ) ಕಳೆದ ಜೂನ್ 2002ರಿಂದ ಆರಂಭಿಸಿದೆ.

ಅಲ್ಲಿಯ 16.38 ಲಕ್ಷ ಮಕ್ಕಳ ದೈಹಿಕ ದಾರ್ಢ್ಯತೆ ಸುಧಾರಿಸುವುದೊಂದಿಗೆ ಶಾಲೆಗಳಲ್ಲಿ ಹಾಜರಾತಿ ಹೆಚ್ಚಿಸಿ ಅವರ ಜ್ಞಾನ ಭಂಡಾರ ಹೆಚ್ಚಲು ಅವಕಾಶ ಮಾಡಿಕೊಟ್ಟಿದೆ.

ಯೋಜನೆಯ ಅಭೂತಪೂರ್ವ ಯಶಸ್ಸಿನಿಂದ ಪ್ರೇರಿತಗೊಂಡ ಸರ್ಕಾರ ಇದನ್ನು ರಾಜ್ಯದಾದ್ಯಂತ 1ನೇ ಜುಲೈ 2003ರಿಂದ ಜಾರಿಗೊಳಿಸಲಾಗಿದೆ.

1ರಿಂದ 5ನೇ ತರಗತಿಯಲ್ಲಿ ಕಲಿಯುತ್ತಿರುವ 50 ಲಕ್ಷ ಮಕ್ಕಳು ಈ ಯೋಜನೆಯ ಲಾಭ ಪಡೆಯಲಿದ್ದಾರೆ.

ಅಕ್ಷರ ದಾಸೋಹ - ಅನಕ್ಷರತೆ ಹಾಗೂ ಬಾಲಕಾರ್ಮಿಕತೆ ನೀಗಿಸುವ ಸಾಮಾಜಿಕ ಹೊಣೆಗಾರಿಕೆಯ ರೂ. 202 ಕೋಟಿ ವೆಚ್ಚದ ಬೃಹತ್ ಕಾರ್ಯಕ್ರಮ.

ಸಮಾಜ ಸೇವಾ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳು, ಸ್ತ್ರೀ ಶಕ್ತಿಯಂತಹ ಸ್ವ-ಸಹಾಯ ಸಮೂಹಗಳು ಮಕ್ಕಳಲ್ಲಿ ಆತ್ಮ ಸ್ಥೈರ್ಯ ಮತ್ತು ಸಾಧನೆಗೆ ಛಲ ಮೂಡಿಸುವ ಈ ಒಂದು ಮಹಾತ್ವಾಕಾಂಕ್ಷೆಯ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಒಂದು ಅಪೂರ್ವ ಅವಕಾಶ.

ಬನ್ನಿ ಇದರಲ್ಲಿ ಪಾಲ್ಗೊಳ್ಳಿ

ಸದೃಢ ಮತ್ತು ಸಾಕ್ಷರ ಮಕ್ಕಳ ರೂವಾರಿ - ಅಕ್ಷರ ದಾಸೋಹ

- ಕರ್ನಾಟಕ ವಾರ್ತೆ

ಹೋರಾಟಗಾರ್ತಿಗೆ ವಿಶ್ವಮನ್ನಣೆ

- ಎನ್. ಗಾಯತ್ರಿ



ಇರಾನಿನ ಶಿರಿನ್ ಇಬಾದಿ - ಇತ್ತೀಚೆಗೆ ವಿಶ್ವದೆಲ್ಲೆಡೆ ಕೇಳಿಬಂದ ಹೆಸರು. ಅಂತರರಾಷ್ಟ್ರೀಯವಾಗಿ ಅಷ್ಟೇನೂ ಸುಪರಿಚಿತಳಲ್ಲದ ಈ ಇರಾನಿ ಮಹಿಳೆ ನೊಬೆಲ್ ಪ್ರಶಸ್ತಿ ಪಡೆದ ಸುದ್ದಿ ಪತ್ರಿಕೆಗಳಲ್ಲಿ ಪ್ರಕಟವಾದಾಗ ಜನ ಅಚ್ಚರಿಪಟ್ಟರು. ಅವಳ ದೇಶದಲ್ಲೇ ಕೆಲವರಿಗೆ ಸಂತಸ ; ಮತ್ತೆ ಕೆಲವರಿಗೆ ತಿರಸ್ಕಾರ. ಅವರಲ್ಲಿ ಕೆಲವರು ಮೂಗು ಮುರಿದವರೂ ಇದ್ದಾರೆ. ' ಇದು ರಾಜಕೀಯ ಆಯ್ಕೆ' ಜಗತ್ತಿನ ಅತ್ತಿತ್ತ ಕೇಳಿ ಬಂದ ತಕ್ಷಣದ ಪ್ರತಿಕ್ರಿಯೆ. ಅದೇನೇ ಇರಲಿ ಮಾನವಹಕ್ಕುಗಳ ಹೋರಾಟಕ್ಕೆಂದು ಸಂದ ಈ ಮನ್ನಣೆ ಇರಾನ್ ಪಡೆದ ಮೊದಲ ನೊಬೆಲ್ ಪ್ರಶಸ್ತಿಯೂ ಹೌದು.

ಇಂದಿನ ಇರಾನಿನ ಸಾಂಸ್ಕೃತಿಕ, ರಾಜಕೀಯ ಸನ್ನಿವೇಶದಲ್ಲಿ ಈ ಪ್ರಶಸ್ತಿ ಯಾವ ರೀತಿಯ ಪರಿಣಾಮ ಬೀರುತ್ತದೋ ಗೊತ್ತಿಲ್ಲ. ಆದರೂ ಕಳೆದೆರಡು ದಶಕಗಳಿಂದೀಚೆಗಿನ ಇರಾನಿನ ಉಸಿರುಕಟ್ಟಿಸುವ ವಾತಾವರಣದಲ್ಲಿ ಮಹಿಳೆಯೊಬ್ಬಳು ದನಿಎತ್ತಿ ಸತತವಾಗಿ ಹೋರಾಟ ನಡೆಸಿರುವುದು ಕಡಿಮೆಯೇನಲ್ಲ. 1979ರ ಕ್ರಾಂತಿ ಪೂರ್ವ ಇರಾನಿನ ಶಾ ಆಳ್ವಿಕೆಯಲ್ಲಿ ಆರ್ಥಿಕ ಸಂಕಷ್ಟಗಳ ನಡುವೆಯೂ ಅಲ್ಲಿನ ಜನತೆಗೆ ಸ್ವಲ್ಪಮಟ್ಟಿಗೆ ಸ್ವಾತಂತ್ರ್ಯದ ಸಿಂಚನವಿತ್ತು. ಪಾಶ್ಚಾತ್ಯೀಕರಣ ಅವರ ಬದುಕಿನ ಅವಕಾಶಗಳನ್ನು ವಿಶಾಲಗೊಳಿಸಿತ್ತು. ವಿಶೇಷವಾಗಿ ಇಲ್ಲಿನ ಮಹಿಳೆಯರು ಬೇರೆ ಮುಸ್ಲಿಂ ರಾಷ್ಟ್ರಗಳ ಮಹಿಳೆಯರಿಗಿಂತ ಹೆಚ್ಚು ಸ್ವಾತಂತ್ರ್ಯವನ್ನು ಅನುಭವಿಸಿದ್ದರು. ವಿದ್ಯಾಭ್ಯಾಸ, ಉದ್ಯೋಗ ಇವರಿಗೆ ಕೈಗೆಟುಕುವಂತಿತ್ತು. ಬ್ರಿಟನ್ ಮತ್ತು ಅಮೆರಿಕದ ಕೈಗೊಂಬೆಯಾಗಿದ್ದ ಶಾನ ಆಳ್ವಿಕೆಯಲ್ಲಿ ಇರಾನಿನ ಸಂಪತ್ತೆಲ್ಲ ಕೆಲವೇ ಉಳ್ಳವರ ಅಧೀನದಲ್ಲಿತ್ತಾದರೂ ದೇಶದಲ್ಲಿ ವ್ಯಾಪಿಸಿದ್ದ ಪಾಶ್ಚಾತ್ಯೀಕರಣದಿಂದಾಗಿ ಮಹಿಳೆಯರು ಅಭಿವ್ಯಕ್ತಿ ಸ್ವಾತಂತ್ರ್ಯ ಅನುಭವಿಸಿದ್ದಿದೆ. ಇರಾನಿನ ಶಾಲಾ ಕಾಲೇಜುಗಳಲ್ಲಿ ಹುಡುಗಿಯರು ಕಾಣಬರುತ್ತಿದ್ದುದು ಅಷ್ಟೇ ಅಲ್ಲ, ವಿದ್ಯಾಭ್ಯಾಸಕ್ಕೆಂದು ಹೊರದೇಶಗಳಿಗೂ ಇಲ್ಲಿನ ಮಹಿಳೆಯರು ಹೋಗಿ ಬರುತ್ತಿದ್ದರು. ಇಂತಹ ಹಿನ್ನೆಲೆಯಲ್ಲಿ ಶಿಬಿನ್ ಇರಾದಿ ಟೆಹರಾನಿನಲ್ಲಿ ಕಾನೂನು ಪದವಿ ಪಡೆದು ಅಲ್ಲಿನ ಸಿಟಿ ಕೋರ್ಟಿನಲ್ಲಿ 1975ರಿಂದ 1979ರ ವರೆಗೂ ಅಧ್ಯಕ್ಷೆಯಾಗಿದ್ದರು. ನಂತರ ಅಲ್ಲಿಯೇ ನ್ಯಾಯಧೀಶೆಯೂ ಆದರು.

ಬಲಿಷ್ಠ ರಾಷ್ಟ್ರಗಳ ಹಿಡಿತದಿಂದ ಮುಕ್ತವಾಗಿ ಇರಾನಿನಲ್ಲಿ 1979ರಲ್ಲಿ ಖೊಮಿನಿ ನಡೆಸಿದ ಇಸ್ಲಾಮಿಕ್ ಕ್ರಾಂತಿ ಇರಾನಿನ ಜನತೆಯ ಪಾಲಿಗೆ ದುಸ್ವಪ್ನವಾಯಿತು. ಆರ್ಥಿಕವಾಗಿ ಇದು ಸ್ವಾಗತಾರ್ಹ ಬದಲಾವಣೆಯಾದರೂ ಖೊಮಿನಿ ಸರ್ಕಾರ ನಡೆಸಿದ ಧಾರ್ಮಿಕ ಮತ್ತು ಸಾಂಸ್ಕೃತಿಕ ಗೂಂಡಾಗಿರಿ ಜನಸಾಮಾನ್ಯರ ಬದುಕನ್ನು ನರಕಗೊಳಿಸಿದೆ. ಇಸ್ಲಾಮಿಕ್ ಕ್ರಾಂತಿಯ ನಂತರ ಇಲ್ಲಿಯ ಮಹಿಳೆಯರ, ಮಕ್ಕಳ ಬದುಕಿನ ದುರವಸ್ಥೆ ಆರಂಭವಾಯಿತು. ಇಂತಹ ಸಂದರ್ಭದಲ್ಲಿ ಹೋರಾಟದ ಪಂಜನ್ನು ಹಿಡಿದು ಹೊರಟವರು ಶಿರಿನ್ ಇಬಾದಿ.

ಮಾನವ ಹಕ್ಕುಗಳ ಪ್ರತಿಪಾದಕಿ ಮತ್ತು ಕಾರ್ಯಕರ್ತೆಯೆಂದೇ ಪ್ರಖ್ಯಾತರಾದ ಶಿರಿನ್ ಇಬಾದಿ ಇರಾನ್‌ನಲ್ಲಿ ಜನಿಸಿದ್ದು 1947ರಲ್ಲಿ. ಕಾನೂನು ವಿದ್ಯಾಭ್ಯಾಸದ ನಂತರ ಕೈಗೊಂಡದ್ದು ವಕೀಲಿ ವೃತ್ತಿ. 1979ರಲ್ಲಿ ಇರಾನಿನ ಮೊದಲ ಮಹಿಳಾ ನ್ಯಾಯಾಧೀಶೆಯಾದ ಶಿರಿನ್, ಖೊಮಿನಿ ಆಳ್ವಿಕೆಯ ದೌರ್ಜನ್ಯದ ಹೊಡೆತಕ್ಕೆ ಸಿಕ್ಕಿ ಬಲವಂತದಿಂದ ರಾಜೀನಾಮೆ ಕೊಡಬೇಕಾಗಿ ಬಂತು. ಇದಕ್ಕಾಗಿ ಎದೆಗುಂದದ ಆಕೆ ತನ್ನ ಹೋರಾಟದ ಪಥವನ್ನು ವಿಶ್ವವಿದ್ಯಾಲಯಗಳಲ್ಲಿ, ಸಾಮಾಜಿಕ ವೇದಿಕೆಗಳಲ್ಲಿ ಮತ್ತು ನ್ಯಾಯಾಲಯದ ಕಟ್ಟೆಗಳಲ್ಲಿ ವಿಸ್ತರಿಸಿಕೊಂಡರು.

ಶಿರಿನ್ ಇಬಾದಿ ಕನಸುಗಾರ್ತಿ. ದೇಶದ ಎಲ್ಲ ಸಂಕಷ್ಟಗಳ ನಡುವೆಯೂ ಸುಧಾರಿತ ಇರಾನ್‌ನ ಕನಸು ಕಾಣುವಾಕೆ. ಇಸ್ಲಾಮಿಕ್ ಕಾನೂನಿನ ಪುನರ್ವ್ಯಾಖ್ಯಾನಕ್ಕಾಗಿ ಒತ್ತಾಯಿಸುವ ಇವರು ಅಂತಹ ಪ್ರಯತ್ನಗಳನ್ನು ಸಾರ್ವಜನಿಕ ಚರ್ಚೆಗೆ

ಗುರಿಮಾಡಲು ಹೋಗಿ ಪೋಲಿಸರಿಂದ ಬಹಳಷ್ಟು ಬಾರಿ ಶಿಕ್ಷೆಗೆ ಗುರಿಯಾಗಿದ್ದಾರೆ. ಪ್ರಜಾಸತಾತ್ಮಕ ಮೌಲ್ಯಗಳಾದ ಸಮಾನ ಕಾನೂನು, ಧಾರ್ಮಿಕ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ ಮುಂತಾದ ಮಾನವೀಯ ಹಕ್ಕುಗಳನ್ನು ಪ್ರತಿನಿಧಿಸುವ ಹೊಸ ಇಸ್ಲಾಮಿಕ್ ಕಾನೂನು ಬೇಕೆನ್ನುವ ಶಿರಿನ್ ಅದಕ್ಕಾಗಿ ಹೋರಾಟ ನಡೆಸುತ್ತಿದ್ದಾರೆ. ಸುಧಾರಿತ ಇಸ್ಲಾಮಿಕ್ ಕಾನೂನಿನ ಬೇಡಿಕೆ ಮಾನವ ಹಕ್ಕುಗಳಿಗಾಗಿ ನಡೆಸುವ ಹೋರಾಟ ಎಂದು ಅಚಲವಾಗಿ ನಂಬುವ ಶಿರಿನ್‌ರ ವಾದ ಈ ದೇಶದ ಮೂಲಭೂತವಾದಿಗಳಿಗೆ ನುಂಗಲಾರದ ತುತ್ತಾಗಿದೆ. ಇರಾನಿನಲ್ಲೇ ಹುಟ್ಟಿದ ಬಹಾಯಿ ಧರ್ಮ ಆರಂಭದ ದಿನದಿಂದಲೂ ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಆ ಬಹಾಯಿ ಧರ್ಮದ ಸದಸ್ಯರ ಹಕ್ಕಿಗಾಗಿಯೂ ಶಿರಿನ್ ಹೋರಾಟ ನಡೆಸಿದ್ದಾರೆ. ಇರಾನ್‌ನಲ್ಲಿರುವ ನಿರಾಶ್ರಿತರ ಹಕ್ಕುಗಳಿಗಾಗಿಯೂ, ಇಬಾದಿಯ ಹೋರಾಟ ಸಾಗಿದೆ.

ವಕೀಲೆಯಾಗಿ ಶಿರಿನ್ ಇಬಾದಿ ಹಲವಾರು ವಿವಾದಾತ್ಮಕ ಪ್ರಕರಣಗಳಲ್ಲಿ ಸಿಲುಕಿಕೊಂಡಿದ್ದಾರೆ. 1999-2000ರಲ್ಲಿ ಇರಾನಿನಲ್ಲಿ ಬರಹಗಾರರು ಮತ್ತು ಬುದ್ಧಿಜೀವಿಗಳ ಸರಣಿಕೊಲೆಯಾಯಿತು. ಈ ಕುಟುಂಬಗಳ ಪರವಾಗಿ ಆಕೆ ವಕೀಲೆಯಾಗಿ ಕೆಲಸ ಮಾಡಿದ್ದಾರೆ. ಇಂತಹ ಎಷ್ಟೋ ಪ್ರಕರಣಗಳಲ್ಲಿ ಸರ್ಕಾರದ ಬೆದರಿಕೆಯನ್ನು ಚಿಂತಿಸದೆ ಶಿರಿನ್ ನ್ಯಾಯಕ್ಕಾಗಿ ಮುನ್ನುಗ್ಗಿದ್ದಾರೆ. 1999ರಲ್ಲಿ ಟೆಹರಾನ್ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮೇಲೆ ನಡೆದ ಹಲ್ಲೆಯಲ್ಲಿ ಕೆಲವರು ಮರಣ ಹೊಂದಿದರು. ಈ ಪ್ರಕರಣದ ಹಿಂದಿನ ರಹಸ್ಯವನ್ನು ಬೇಧಿಸಿ ಅದಕ್ಕಾಗಿ ಪ್ರತಿಭಟನೆಯ ಸಾರಥ್ಯವನ್ನು ವಹಿಸಿದ ಶಿರಿನ್ ಪೋಲಿಸರ ಅವಕೃಪೆಗೆ ಕಾರಣರಾಗಬೇಕಾಯ್ತು. ಇಂತಹ ಕಾರಣಗಳಿಗಾಗಿ ಅವರು ಹಲವಾರು ಬಾರಿ ಜೈಲು ಶಿಕ್ಷೆ ಅನುಭವಿಸಬೇಕಾಗಿ ಬಂದದ್ದಿದೆ. ಅಷ್ಟೇ ಅಲ್ಲ, ಅವರು ವಕೀಲಿ ವೃತ್ತಿಯನ್ನು ಕೈಗೊಳ್ಳುವುದಕ್ಕೂ ಬಹಿಷ್ಕಾರ ಹಾಕಲಾಯ್ತು.

ಈಗ ಟೆಹರಾನ್ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕಿಯಾಗಿ ಕೆಲಸ ಮಾಡುತ್ತಿರುವ ಶಿರಿನ್‌ರ ಹೋರಾಟದ ನೇತೃತ್ವ ಮಹಿಳೆಯರ ಮತ್ತು ಮಕ್ಕಳ ಹಕ್ಕುಗಳಿಗಾಗಿ. ಮಕ್ಕಳ ಹಕ್ಕುಗಳ ಸಂರಕ್ಷಣಾ ಸಂಘದ ಸ್ಥಾಪಕರಾದ ಇವರು ಹಲವಾರು ಅಕೆಡೆಮಿಕ್ ಪುಸ್ತಕಗಳನ್ನೂ ಬರೆದಿದ್ದಾರೆ. ಇಂಗ್ಲಿಷಿಗೆ ಭಾಷಾಂತರವಾಗಿರುವ ಇವರ ಪುಸ್ತಕಗಳು 'The Rights of child', 'A study of legal aspects of children's rights in Iran', History and documentation of Human rights in Iran.

ಇಂದು ಇರಾನಿನ ಆಂತರಿಕ ಶಾಂತಿ ಹದಗೆಟ್ಟಿದೆ. ಸರ್ಕಾರದ ಧಾರ್ಮಿಕ ಭಯೋತ್ಪಾದಕತೆಯಿಂದ ಜನ ತತ್ತರಿಸುತ್ತಿದ್ದಾರೆ. ಸಾಂಸ್ಕೃತಿಕ ಗೂಂಡಾಗಿರಿಯಿಂದ ಜನತೆಯ ಉಸಿರುಕಟ್ಟುತ್ತಿದೆ. ಇಂತಹ ಸಂದರ್ಭದಲ್ಲಿ ತಲೆಯೆತ್ತುವ ಪ್ರತಿಭಟನೆಯ ಯಾವುದೇ ದನಿಯನ್ನು ಮೊಟಕುಮಾಡುವ, ಅಳಸಿ ಹಾಕುವ ಪ್ರಯತ್ನವನ್ನು ಮಾಡಲು ಬಲಿಷ್ಠವಾದ ಸರ್ಕಾರ ಮತ್ತು ಕಾನೂನು ವ್ಯವಸ್ಥೆ ಸದಾ ಸಿದ್ಧವಾಗಿದೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಾಗಿ ಪ್ರತಿಭಟಿಸಿ ಜೈಲು ಸೇರುವ ವಿದ್ಯಾರ್ಥಿಗಳ, ನಾಗರೀಕರ ಪರವಾಗಿ ಕಾನೂನಿನ ಚೌಕಟ್ಟಿನಲ್ಲಿ ಶಾಂತಿಯುತವಾಗಿ ನಡೆದಿದೆ ಇಬಾದಿಯ ಹೋರಾಟ.

ಶಾಂತಿಪ್ರೇಮಿ ಹೋರಾಟಗಾರ್ತಿಗೆ ಸಂದ ವಿಶ್ವ ಮನ್ನಣೆಯಿಂದ ಇರಾನ್ ಸರ್ಕಾರದ ನೀತಿಯ ಮೇಲೆ ಪ್ರಭಾವ ಬೀರಬಹುದೇ? - ಇದು ಎಲ್ಲರ ಪ್ರಶ್ನೆ. ಸರ್ಕಾರದ ವಕ್ತಾರರು ಈ ಬಗ್ಗೆ ಏನೂ ಪ್ರತಿಕ್ರಿಯಿಸಿಲ್ಲ. ಅಲ್ಲಿನ ಸುದ್ದಿ ಮಾಧ್ಯಮಗಳು ಈ ಪ್ರಶಸ್ತಿಯ ಸುದ್ದಿಯನ್ನು ಬಹಳ ತಡವಾಗಿಯೇ ಪ್ರಕಟಿಸಿದರು. ಇರಾನಿನ ಧಾರ್ಮಿಕ ಮೂಲಭೂತವಾದಿಗಳು ಶಿರನ್‌ಗೆ ನೊಬಲ್ ಪ್ರಶಸ್ತಿ ಸಿಕ್ಕಿರುವುದನ್ನು ಖಂಡಿಸಿ, ಇರಾನಿನ ಆಂತರಿಕ ವ್ಯವಹಾರಗಳಲ್ಲಿ ವಿದೇಶಿಯರ ಹಸ್ತಕ್ಷೇಪದ ಕೃತ್ಯವಿದೆಂದು ಭಾವಿಸಿದ್ದಾರೆ. ಆದರೆ ಸುದ್ದಿ ತಿಳಿದಾಗ ಶಿರಿನ್ ಪ್ಯಾರಿಸ್‌ನಲ್ಲಿದ್ದರು. ಅಲ್ಲಿ ಪತ್ರಕರ್ತರ ಸಭೆಯನ್ನುದ್ದೇಶಿಸಿ ಅವರು ಮಾತನಾಡಿದರು: ''ಈ ಪ್ರಶಸ್ತಿಯಿಂದ ನನಗೆ ಖುಷಿಯಾಗಿದೆ. ನನ್ನ ದೃಷ್ಟಿಯಲ್ಲಿ ಈ ಬಹುಮಾನಕ್ಕೆ ನಾನೊಬ್ಬಳೇ ಅರ್ಹಳಲ್ಲ. ಅದು ಮಾನವ ಹಕ್ಕುಗಳಿಗಾಗಿ ಹೋರಾಡುತ್ತಿರುವ ಎಲ್ಲರಿಗೂ ಸೇರಿದ್ದು. ಈ ಪ್ರಶಸ್ತಿಯಿಂದ ಪ್ರಭಾವಿತವಾಗಿ ಇರಾನ್ ಸರ್ಕಾರ ಅಣ್ವಸ್ತ್ರದ ಕಾರ್ಯಕ್ರಮಗಳನ್ನು ಕೈಬಿಡುವುದೆಂದು ಭಾವಿಸುವೆ. ನಾನೆಂದೂ ಯುದ್ಧ ವಿರೋಧಿ, ಶಾಂತಿ ಪ್ರೇಮಿ. ''ಸ್ಕಾರ್ಫ್ ಇಲ್ಲದೆ ಪತ್ರಕರ್ತರನ್ನು ಉದ್ದೇಶಿಸಿ ಮಾತನಾಡಿದ ಶಿರಿನ್ ಇರಾನಿನ ರಾಜಕೀಯದಲ್ಲಿ ವಿದೇಶಿಯರು ಹಸ್ತಕ್ಷೇಪ ಮಾಡುವುದನ್ನು ಕಟುವಾಗಿ ಟೀಕಿಸಿದರು. ಅಮೆರಿಕೆಯನ್ನು ತರಾಟೆಗೆ ತೆಗೆದುಕೊಂಡ ಶಿರಿನ್ 'ನಮಗೆ ಯಾರ ಹಣವೂ ಬೇಡ. ಯುದ್ಧ ಮಾಡಲು ನಮಗೆ ಹೊರಗಿನವರು ಹಣ ಕೊಡುವುದು ಬೇಡ. ಶಾಂತಿ ನಮ್ಮ ಮೊದಲ ಆದ್ಯತೆ' ಎಂದರು. ಇರಾನ್‌ನಲ್ಲೇ ಇದ್ದ ಅವರ ಪತಿ ಜವಾದ್ ತವಸೋಲಿಯನ್ ''ಈ ಪ್ರಶಸ್ತಿಯಿಂದ ನನಗೆ ತುಂಬಾ ಖುಷಿಯಾಗಿದೆ. ಇಂದು ಇರಾನಿನ ಸಮಾಜ ಸುಧಾರಕರಿಗೆ ಮಹತ್ವದ ದಿನ. ದೇಶಕ್ಕೆ ಮಹತ್ವದ ಹೆಮ್ಮೆಯ ದಿನ'' ಎಂದು ಪ್ರತಿಕ್ರಿಯಿಸಿದರು.

ಪಾಕಿಸ್ಥಾನದ ಅಸ್ಮಾ ಜಹಂಗೀರಳಂತೆ ತನ್ನ ನಾಡಿನ, ಜನರ ಸುಧಾರಣೆಗಾಗಿ ದಣಿವರಿಯದ ಹೋರಾಟದಲ್ಲಿ ತೊಡಗಿರುವ ಶಿರಿನ್ ಇಬಾದಿ ಮಾನವ ಹಕ್ಕುಗಳ ಹೋರಾಟಕ್ಕೆ ಮತ್ತೊಂದು ಹೆಸರು. ಈ ಶಾಂತಿಪ್ರೇಮಿಯು ಹಚ್ಚಿಟ್ಟಿರುವ ಹಣತೆ ಸದಾ ಬೆಳಗಲಿ.

★

ಕಲ್ಪನಾ ಚಾವ್ಲಾ

ಕಣ್ಣಲ್ಲಿ ವಿಶ್ವವಿಜೇತೆಯ ಸಾಂದ್ರಭಾವ,
ಮುಖದ ತುಂಬಾ ಅರಳಿದ ಮುಗುಳ್ನಗೆ.
ಸೀಮಾರಹಿತ ಸಾಹಸಿ,
ಪ್ರಯೋಗಗಳಿಂದ ಪುಟಗೊಂಡ ಪ್ರಾವೀಣ್ಯ,
ನಿರಂತರ ದೀಕ್ಷೆಯ ನಿಧಿ,
ಪರಿಶ್ರಮ, ಪ್ರಾಮಾಣಿಕತೆಗಳಿಂದ ಪಾಲನೆಗೊಂಡ ಪಕ್ವತೆ,
ತಾಯ್ನಾಡಿನಲ್ಲಿ ಚಿಲುಮೆಯಾಗಿ ಚಿಮ್ಮಿದಾಕೆ,
ಪರದೇಶದಲ್ಲಿ ಕಾರಂಜಿಯಾಗಿ ಪುಟದ ಪುಣ್ಯವಂತೆ.
ತಲ್ಲಣ, ತವಕಗಳನ್ನು ಮೀರಿ ಬೆಳೆದು
ತಣ್ಣನೆಯ ಮನಸ್ಸನ್ನು ತನ್ನದಾಗಿಸಿಕೊಂಡು
ಭುವಿಯಿಂದ ಬಾನಿಗೆ ಏರಿದವಳು,
ಬಾನಿಂದ ಭುವಿಯನ್ನು ವೀಕ್ಷಿಸಿದವಳು.

ಬಾಲ್ಯಕಾಲಸಖಿಯರಿಗೆ ನೀನು ಮುದ್ದಿನ ಮೋಂಟು,
ಕಾರ್ನಾಲ್ ಶಾಲಾ ಮಕ್ಕಳಿಗೆ ಬೆಳೆಯುತ್ತಿದ್ದ ಬಡೀದೀದಿ,
ನಾಸಾದವರಿಗೆ ಕೇಸಿ ಮಾತ್ರ,
ನಮಗೆ ನೀನು ಕಲ್ಪನಾ,
ವಾಸ್ತವವೇ ಆಗಿದ್ದ ಕಲ್ಪನಾ.

ಓ ಅನಂತಯಾತ್ರಿ ಕಲ್ಪನಾ,
ನಿನ್ನ ಬದುಕು ಅರಳಿದ ಪರಿ ಬೆರಗುಗಳ ಸುರುಳಿ.
ಗಗನಕುಸುಮವಾಗಿದ್ದ ಗಗನಗಮನ
ನಿನ್ನ ಮುಷ್ಟಿಯಲ್ಲಿ ಸೆರೆಯಾದದ್ದು ಈಗ ಇತಿಹಾಸ.
ನೀಲಿಬಾನಲ್ಲಿ ರೆಕ್ಕೆ ಬಡಿದ ಪುಟ್ಟ ಹಕ್ಕಿಯೇ,
ಮತ್ತೆ ಧರೆಗಿಳಿಯದೆ ಕಾಣದಾದ ಆಗಸದ ಚುಕ್ಕಿಯೇ,
ಕ್ಷಣಗಣನೆ ಕಾಲದಲ್ಲಿ
ಈ ನೆಲದ ಹಂಗು ಬೇಡವೆಂಬ ಭಾವ ಸುಳಿದದ್ದು
ಹೇಗೆ?

ಬದುಕಿನ ಗಳಿಗೆಗಳಲ್ಲಿ ನೀನು
ಸುತ್ತಲ ಜನಕ್ಕೆ ನೀಡಿದ್ದು ತುಷಾರಸಿಂಚನ,
ಪ್ರಾಣಾಹುತಿಯ ಕ್ಷಣದಲ್ಲಿ
ನೆರವಾದದ್ದು ಬೆಂಕಿಯುಂಗುರಗಳ ಗೊಂಚಲು.
ಚರಿತ್ರೆಯಲ್ಲಿ ದಾಖಲಾಗಿದೆ
ನಿನ್ನ ಜನಪರ ಕಾಳಜಿ,
ಮಾನವೀಯ ನಡೆನುಡಿ,
ಗೀತಸಂಗೀತಗಳಲ್ಲಿ ನಿನಗಿದ್ದ ಆಕರ್ಷಣೆಯ ಮೋಡಿ.

ವಿಧಿಯ ವಿಕಟ ಅಟ್ಟಹಾಸದಿಂದ
ನಿನ್ನ ಜಗಿತಕ್ಕೆ ಪೆಟ್ಟು
ಜೀವಕ್ಕೆ ಕುತ್ತು.
ನಗುತ್ತ ಬೆನ್ನು ತಿರುಗಿಸಿ ಹೊರಟವಳು ನೀನು
ಹಿಂದಿರುಗಿ ನೋಡಲಿಲ್ಲ,
ಒಮ್ಮೆಯೂ ಇಲ್ಲ, ಇಲ್ಲ, ಇಲ್ಲ,
ಕಲ್ಪನೆಗಾಗಿ ಕಾತರಿಸಿ ಕಾದಿದ್ದವರು ಕಂಡುಕೊಂಡಿದ್ದು
ಕೇವಲ ಕಣ್ಣೀರು.
ನಾವೆಲ್ಲ ನಿಸ್ಸಹಾಯಕರು,
ವಿಷಾದದ ಅಲೆ ಮೇಲೆ ತೇಲುವ ನಿರ್ಭಾಗ್ಯ ನಾವಿಕರು.
ಕರ್ಪೂರದಂತೆ ಕರಗಿಬಿಟ್ಟೆಯಲ್ಲ ಕಲ್ಪನಾ
ಆದರೇನು?
ನೀನು ಶೂನ್ಯಕ್ಕೆ ಸಂದವಳಲ್ಲ,
ಪೂರ್ಣವನ್ನು ಪಡೆದವಳು.

- ಡಾ. ಎಚ್. ಎಸ್. ಸುಜಾತಾ

CPMG/KA/BG-8/2003-05 RNI No. 45577/88

Posted at Basavanagudi P.O. On the 25th of every Month

ಗಂಡಿಗೆ ಆತ್ಮವಿದೆಯೇ?

ಈ ಪ್ರಪಂಚದ ವ್ಯವಸ್ಥೆ
ಮಾಡಿಟ್ಟ ಜನರೇ ಕೇಳಿ
ನೀವು ಹೆಣ್ಣಿಗೆ ವಿದ್ಯೆಕೊಡಲು
ಹಿಂದೆಮುಂದೆ ನೋಡಿದಿರಿ.

ಅಂತೂ, ನೀವು ಮಾಡಿದ
ವ್ಯವಸ್ಥೆಯಲ್ಲೇ ನಿಮಗೆ
ಪತ್ರ ಬರೆವ, ಲೆಕ್ಕಬರೆವ
ಸಂಬಳ ಎಣಿಸಬಲ್ಲ
ಹೆಣ್ಣಿನ ಅಗತ್ಯಬಿದ್ದದ್ದು
ಹೆಣ್ಣಿನ ಅದೃಷ್ಟವೆನ್ನೋಣವೇ?

ಎದ್ದುಬಿದ್ದು ಅಕ್ಷರ ಕಲಿತ ಹೆಣ್ಣು
ನಿಮ್ಮ ಲೆಕ್ಕ ಬರೆದು
ನಿಮಗೆ ಪ್ರೇಮಪತ್ರ ಬರೆದು
ನಿಮ್ಮ ಕತೆಗಳ ಜೆರಾಕ್ಸ್‌ಕಾಪಿಯನ್ನೋ
ಟೈಪುಕಾಪಿಯನ್ನೋ ಮಾಡುತ್ತ
ಸುಂದರ ಯಂತ್ರವಾದಳು

ರಿಮೋಟ್ ಕಂಟ್ರೋಲ್ ನಿಮ್ಮ ಕೈಲೇ!

ಬೆಳಕು ಅಡುಗೆಮನೆಗೂ ನುಗ್ಗಿದಾಗ
ಯಂತ್ರದ ಕೆಲಸದಲ್ಲಿ
ಶಾಟ್‌ಸರ್ಕ್ಯೂಟೋ ಇಲ್ಲ
ವೋಲ್ಟೇಜ್ ವೇರಿಯಷನ್ನೋ ಆದಾಗ
ಕತ್ತಲು ಮಾಡಿ
ಒಂಟಿಯಾಗಿ ಕುಳಿತು
ಸಣ್ಣಗೆ ಉರಿವ ಒಳಗಿನ ದೀಪಕಂಡು
ತಣ್ಣಗಿನ ನೆಲದಲ್ಲಿ
ಸಾವ ಕಂಡವಳಂತೆ ಒದ್ದಾಡಿ
ಮತ್ತೆ ಮೇಲೆದ್ದಳು.

ಉರಿವ ದೀಪದ ಬೆಳಕಿನಲ್ಲೇ
ಮತ್ತೆ ಮತ್ತೆ ಕನ್ನಡಿನೋಡುವ
ಹಂಬಲ ಅವಳಿಗೆ
ಅದಕ್ಕೇ
ಈ ಪ್ರಪಂಚದಲ್ಲಿ
ಆತ್ಮಕಥೆ ಬರೆದ ಗಂಡಸರಿಗಿಂತ
ಹೆಂಗಸರೇ ಹೆಚ್ಚು
ಗಂಡಿಗೆ ಆತ್ಮವಿದೆಯೇ?

- ಎಸ್. ಮಾಲತಿ

"Achala" 108, Skyline Surabhi,
14 - P , Vidyapeeta Road,
BSK III Stage,
Bangalore - 560 085

To :

Smt/Sri